# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:282 • ನೋಂದಣಿ ನಂ.:KARKAN27911 • ವಿಜಯನಗರ • 06.04.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:282 • Reg.No:KARKAN27911 • VIJAYANAGARA • 06.04.2024 • Saturday • Page:04 • Rs:2


**ಮತದಾನ ನಮ್ಮ ಇರುವಿಕೆಗೆ ಸಾಕ್ಷಿ ಮರೆಯದಿರಿ ಮತದಾನ**







# ಸೌಲಭ್ಯ ಕೊಡ್ತೀವಿ, ನಿರ್ಲಕ್ಷ್ಯ ಸಹಿಸಲ್ಲ

## ಡಿಸಿ ದಿವಾಕರ ಹೇಳಿಕೆ | ಚುನಾವಣಾ ಸಿಬ್ಬಂದಿಗೆ ರುಚಿಕರ ಭೋಜನ | ಊಟ ಸವಿದ ಶಿಕ್ಷಕರಿಂದ ಮೆಚ್ಚುಗೆ

**ಹಂಪಿ ಟೈಮ್ಸ್ ಹೊಸಪೇಟೆ**

ಸರಿಯಾದ ಊಟ, ಕುಡಿಯುವ ನೀರು, ಅಗತ್ಯ ಸೌಲಭ್ಯಗಳ ಕೊರತೆಯಿಂದ ನಲುಗುತ್ತಿದ್ದ ಶಿಕ್ಷಕರು ಚುನಾವಣೆ ಕೆಲಸಕ್ಕೆ ನಿಯೋಜನೆ ಎಂದಾಕ್ಷಣ ಮೂಗು ಮುರಿಯುತ್ತಿದ್ದರು. ಒಲ್ಲದ ಮನಸ್ಸಿನಿಂದಲೂ ಅನಿವಾರ್ಯವಾಗಿ ಕಾಯೋನ್ಮುಖರಾಗುತ್ತಿದ್ದ ಶಿಕ್ಷಕರಿಗೆ ಕಳೆದ ಕೆಲ ಚುನಾವಣೆಗಳಲ್ಲಿ ರುಚಿ ಇಲ್ಲದ ಊಟ ಸೇರಿದಂತೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತಿದ್ದರು. ಆದರೆ ಈ ಬಾರಿ ವಿಜಯನಗರ ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಎಂ.ಎಸ್.ದಿವಾಕರ ಅವರ ನೇತೃತ್ವದಲ್ಲಿ ನಡೆಯುತ್ತಿದ್ದು, ಚುನಾವಣಾ ಕಾರ್ಯದಲ್ಲಿ ತೊಡಗಿದ ಸಿಬ್ಬಂದಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮೊದಲ ಆದ್ಯತೆ ನೀಡಿದ್ದಾರೆ. ಪಿಆರ್‌ಓ ಮತ್ತು ಎಪಿಆರ್‌ಓಗಳಿಗೆ ಶುಕ್ರವಾರ ನಡೆದ ತರಬೇತಿಯಲ್ಲಿ ಶಿಕ್ಷಕರಿಗೆ ಉತ್ತಮ ಗುಣಮಟ್ಟದ ರುಚಿಕರ ಊಟ ನೀಡುವುದರೊಂದಿಗೆ ಶಿಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಲೋಕಸಭಾ ಚುನಾವಣೆಯು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯುವ ನಿಟ್ಟಿನಲ್ಲಿ ಮತದಾನ ದಿನದಂದು ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿಯು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕು. ಅಗತ್ಯ ಸೌಲಭ್ಯ ಒದಗಿಸಲಾಗುವುದು, ಆದರೆ ನಿರ್ಲಕ್ಷ್ಯ ಸಹಿಸಲ್ಲ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ



ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಹೇಳಿದರು.

ಲೋಕಸಭಾ ಚುನಾವಣೆ-2024ರ ಹಿನ್ನೆಲೆಯಲ್ಲಿ ಮತಗಟ್ಟೆಗಳಿಗೆ ನಿಯೋಜನೆಗೊಂಡ ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳು ಮತ್ತು ಸಹಾಯಕ ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹರಪನಹಳ್ಳಿ ಪಟ್ಟಣದ ಹೆಚ್‌ಪಿಎಸ್ ಕಾಲೇಜಿನಲ್ಲಿ ಏಪ್ರೀಲ್ 5ರಂದು ನಡೆದ ಮೊದಲನೇ ಹಂತದ ತರಬೇತಿ ಸ್ಥಳಕ್ಕೆ ಭೇಟಿ ನೀಡಿ ಅವರು ಮಾತನಾಡಿದರು. ಮತದಾನ ದಿನದಂದು ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವು ಅತ್ಯಂತ ಮಹತ್ವದ್ದಾಗಿದೆ. ಭಾರತ ಚುನಾವಣಾ ಆಯೋಗವು ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿಗಳ ಬಗ್ಗೆ ಅರಿತು ಮತಗಟ್ಟೆಗಳಲ್ಲಿ ಮತದಾನ ದಿನದಂದು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ತರಬೇತಿಯಲ್ಲಿ ಹರಪನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 316 ಮತಗಟ್ಟೆ ಅಧಿಕಾರಿಗಳು ಮತ್ತು 391 ಸಹಾಯಕ ಮತಗಟ್ಟೆ ಅಧಿಕಾರಿಗಳು ಭಾಗಿಯಾಗಿದ್ದರು

### ರುಚಿಕರ ಊಟಕ್ಕೆ ಶಿಕ್ಷಕರು ಖುಷ್

ಪಿಆರ್‌ಓ ಮತ್ತು ಎಪಿಆರ್‌ಓಗಳಿಗೆ ತರಬೇತಿಯಲ್ಲಿ ಜಿಲ್ಲಾಡಳಿತದಿಂದ ಉತ್ತಮ ಗುಣಮಟ್ಟದ ರುಚಿಕರ ಊಟ ನೀಡಿದ್ದರು. ಪಾಯಸ, ಚಪಾತಿ, ತರಕಾರಿ ಮತ್ತು ಕಾಳಿನ ಎರಡು ಪಲ್ಲೆ, ಅನ್ನ ಸಾಂಬರ್, ಮಜ್ಜಿಗೆ, ಕೂಲ್ಡ್ ವಾಟರ್ ನೀಡಿ ಬಿಸಿಲಿನ ತಾಪಮಾನದ ದಾಹ ತಗ್ಗಿಸಿದರು. ಜಿಲ್ಲಾಧಿಕಾರಿಗಳು ತರಬೇತಿದಾರರೊಂದಿಗೆ ಕುಶಲೋಪರಿ ವಿಚಾರಿಸಿ, ಊಟ ಸವಿದರು. ಜಿಲ್ಲಾಧಿಕಾರಿಗಳ ಮಾತುಗಳು ಕೆಲಸಕ್ಕೆ ಸ್ಪೂರ್ತಿ, ಚೈತನ್ಯ ತಂದಿವೆ. ಮನೆ ಊಟದ ರುಚಿಯಂತೆ ಅಡುಗೆ ಮಾಡಿಸಲಾಗಿತ್ತು. ಉತ್ತಮ ಊಟದ ವ್ಯವಸ್ಥೆ ಮಾಡಿದ ಜಿಲ್ಲಾಧಿಕಾರಿಗಳಿಗೆ ಅನಂತ ಧನ್ಯವಾದಗಳು ಎಂದು ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಹೂವಿನಹಡಗಲಿಯ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆ ಅಧಿಕಾರಿಗಳು ಮತ್ತು ಸಹಾಯಕ ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಹೂವಿನಹಡಗಲಿ ಪಟ್ಟಣದ ಮೌಂಟ್ ಕಾರ್ಮೆಲ್ ಸ್ಕೂಲ್‌ನಲ್ಲಿ ಮೊದಲನೇ ಹಂತದ ತರಬೇತಿ ನಡೆಯಿತು. ಮಧ್ಯಾಹ್ನ 4 ಗಂಟೆಗೆ ಹೊಸಪೇಟೆಯ ಎಲ್‌ಎಫ್‌ಎಸ್ ಶಾಲೆಯಲ್ಲಿ ನಡೆದ ತರಬೇತಿ ಕಾರ್ಯಕ್ರಮಕ್ಕೆ ಭೇಟಿ ನೀಡಿ ಶಿಕ್ಷಕರೊಂದಿಗೆ ಕುಶಲೋಪರಿ ವಿಚಾರಿಸಿದರು. ಎಡಿಸಿ ಅನುರಾಧ, ತಹಶೀಲ್ದಾರ್ ಶೃತಿ ಎಂ.ಎಂ. ಇತರ ಅಧಿಕಾರಿಗಳಿದ್ದರು.







# ವೀ.ವಿ.ಸಂಘದ ನಾಹರ್ ಬಿ.ಇಡಿ ಕಾಲೇಜಿಗೆ ಮೂರು ರ್‍ಯಾಂಕ್


**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಷಾ ಭವರ್‌ಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯದ ಮೂವರು ವಿದ್ಯಾರ್ಥಿನೀಯರು ಬಳ್ಳಾರಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 2022-23ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಿದ ಬಿ.ಇಡಿ. ಪದವಿ ಪರೀಕ್ಷೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ಐದನೇ ರ್‍ಯಾಂಕ್ ಪಡೆದಿದ್ದಾರೆ.

ಬಿ.ಇಡಿ. ಪದವಿ ಪರೀಕ್ಷೆಯಲ್ಲಿ ರ್‍ಯಾಂಕ್ ವಿಜೇತರ ಪಟ್ಟಿಯನ್ನು ಬಿಡುಗಡೆ ಮಾಡಿದೆ . ಬಿ.ಸಾಜೀದಾ ಪ್ರಥಮ ರ್‍ಯಾಂಕ್, ಬುಸ್ರಾ ಫಾತೀಮಾ ತೃತೀಯ ರ್‍ಯಾಂಕ್ ಹಾಗೂ ಅನನ್ಯ ಐದನೇ ರ್‍ಯಾಂಕ್ ಪಡೆದಿದ್ದಾರೆ. ವೀ.ವೀ.ಸಂಘದ ಷಾ ಭವರ್‌ಲಾಲ ನಾಹರ್ ಮಹಾವಿದ್ಯಾಲಯದ ಕೀರ್ತಿ ಹೆಚ್ಚಿಸಿದ ರ್‍ಯಾಂಕ್ ವಿಜೇತ ಪ್ರಶಿಕ್ಷಣಾರ್ಥಿಗಳಿಗೆ ವೀರಶೈವ ವಿದ್ಯಾ ವರ್ಧಕ ಸಂಘದ ಗೌರವಾನ್ವಿತ ಅಧ್ಯಕ ಅಲ್ಲಂ ಗುರುಬಸವರಾಜ ಉಪಾಧ್ಯಕ್ಷ ಜಾನಕುಂಟೆ ಬಸವರಾರ್ ಕಾರ್ಯದರ್ಶಿ ಡಾ.







ಅರವಿಂದ ಪಾಟೀಲ್, ಸಹಕಾರ್ಯದರ್ಶಿ ಮೇಟಿ ಪಂಪನಗೌಡ ಕೋಶಾಧಿಕಾರಿ ಬೈಲುದ್ದಿಗೇರಿ ಎರ್ರಿಸ್ವಾಮಿ ಹಾಗೂ ಆಡಳಿತ ಮಂಡಳಿ ಅಧ್ಯಕ್ಷ ಕರಿಬಸವರಾಜ ಬಾದಾಮಿ, ಆಡಳಿತ ಮಂಡಳಿ ಸದಸ್ಯರು ಪ್ರಾಂಶುಪಾಲರಾದ ಡಾ. ಎನ್. ವಿಶ್ವನಾಥಗೌಡ, ಐಕ್ಯೂಎಸಿ ಸಂಯೋಜಕರಾದ ಡಾ.ಜಗದೀಶ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಏ.10 ಸಣ್ಣಕ್ಕಿ ವೀರಭದ್ರೇಶ್ವರ ಜಾತ್ರಾ ಮಹೋತ್ಸವ

## ಬಡಾವಣೆ ಪೊಲೀಸರಿಂದ ಶಾಂತಿ ಸಭೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಏ.9,10 ಮತ್ತು 11 ರಂದು ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ.

ಏ.9 ರಂದು ಸಂಜೆ 4ಕ್ಕೆ ಮೇನ್ ಬಜಾರ್‌ನಲ್ಲಿರುವ ಶ್ರೀಪೇಟೆ ಬಸವೇಶ್ವರ ದೇವಸ್ಥಾನದಿಂದ ಉತ್ಸವವು ಸಕಲ ವಾದ್ಯಗಳೊಂದಿಗೆ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನ ತಲುಪಲಿದೆ. ಸಂಜೆ 5 ಕ್ಕೆ ಹರಕೆಹೊತ್ತ ಭಕ್ತರಿಂದ ಅಗ್ನಿಕುಂಡ ಪ್ರವೇಶ ಜರುಗಲಿದೆ. ಏ.10 ರಂದು ಬೆಳಿಗ್ಗೆ ಮಡಿತೇರು, ಸಂಜೆ 5ಕ್ಕೆ ಮಹಾರಥೋತ್ಸವ ಜರುಗಲಿದೆ. ಏ.11 ರಂದು ಸಂಜೆ 6ಕ್ಕೆ ಕಡುಬಿನ ಕಾಳಗ ಕಾರ್ಯಕ್ರಮ ಜರುಗಲಿದೆ. ಮಹಾರಥೋತ್ಸವಕ್ಕೆ ಬಾಳೆ ಹಣ್ಣು ಎಸೆಯುವುದು ನಿಷೇಧಿಸಲಾಗಿದ್ದು, ಉತ್ತುತ್ತಿಯನ್ನು ಎಸೆದು ಭಕ್ತಿ ಸಮರ್ಪಿಸಬೇಕು ಎಂದು ಶ್ರೀ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನ ಟ್ರಸ್ ತಿಳಿಸಿದೆ.

ರಥೋತ್ಸವ ಕುರಿತು ಗುರುವಾರ ಸಂಜೆ ದೇವಸ್ಥಾನಲ್ಲಿ ಬಡಾವಣೆ ಠಾಣೆ ಪಿಎಸ್‌ಐ ಗಂಗಾಧರ ಬುರ್ಲಿ ಶಾಂತಿ ಸಭೆ ನಡೆಸಿ ಮಾತನಾಡಿದರು. ರಥೋತ್ಸವಕ್ಕೆ ಅಗತ್ಯ ಪೊಲೀಸ್ ಭದ್ರತೆ ನೀಡಲಾಗುವುದು. ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಯಾವುದೇ ರಾಜಕೀಯ >>4

# ಏ.07 ರಂದು ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110 ಕೆ.ವಿ ಮೋಕಾ- ಮೀನಹಳ್ಳಿ ಮಾರ್ಗದಲ್ಲಿ ಲಿಲೋ ನಿರ್ಮಾಣ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಏ.07 ರಂದು ಬೆಳಿಗ್ಗೆ 7 ರಿಂದ ಸಂಜೆ 6 ರ ವರೆಗೆ ಗ್ರಾಮೀಣ ಪ್ರದೇಶಗಳ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಮೋಹನ್ ಬಾಬು ಅವರು ತಿಳಿಸಿದ್ದಾರೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:** 110/11 ಕೆ.ವಿ ವಿದ್ಯುತ್ ಉಪ-ಕೇಂದ್ರ ಮೋಕಾ ಮಾರ್ಗದ ಮೋಕಾ ಉಪ-ಕೇಂದ್ರದಿಂದ ಹೊರಡುವ ಎಲ್ಲಾ 11 ಕೆ.ವಿ ವಿದ್ಯುತ್ ಮಾರ್ಗಗಳು, 110/11 ಕೆ.ವಿ ವಿದ್ಯುತ್ ಉಪ-ಕೇಂದ್ರ ಮೀನಹಳ್ಳಿ ಮಾರ್ಗದ ಮೀನಹಳ್ಳಿ ಉಪ-ಕೇಂದ್ರದಿಂದ ಹೊರಡುವ ಎಲ್ಲಾ ಕೆ.ವಿ ವಿದ್ಯುತ್ ಮಾರ್ಗಗಳು, 33/11 ವಿದ್ಯುತ್ ಉಪ-ಕೇಂದ್ರ ಯರ್ರಗುಡಿ ಮಾರ್ಗದ ಯರ್ರಗುಡಿ ಉಪ-ಕೇಂದ್ರದಿಂದ ಹೊರಡುವ ಎಲ್ಲಾ 11.ಕೆ.ವಿ ವಿದ್ಯುತ್ ಮಾರ್ಗಗಳು, ಮೆ. ಜಾನಕಿ ಕಾರ್ಪೋ.ಪ್ರೈ.ಲಿ, ಮೆ.ಬಸಾಯಿ ಸ್ಟೀಲ್ ಪ್ರೈ.ಲಿ, ಮೆ.ಕ್ಲೀನ್ ಮ್ಯಾಕ್ಸ್ ಸೋಲಾರ್, ಮೆ. ಕ್ಲೀನ್ ಸೋಲಾರ್, ಮೆ.ಕ್ಲೀನ್ ಸೋಲಾರ್, ಮೆ. ಮೌರ್ಯ ಸೀಲಾಮ್ ಸೋಲಾರ್ ಐ.ಪಿ.ಪಿ ಮಾರ್ಗಗಳು ಸೇರಿದಂತೆ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ತಿಳಿಸಿದ್ದಾರೆ.





**ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ**

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್‌ಎಸ್‌ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299






## ಬೆಳಕಿನ ಹಾದಿ

### ಹೊಂದಾಣಿಕೆಯ ಅವಶ್ಯಕತೆ

ಹೊಂದಾಣಿಕೆ ಎನ್ನುವುದು ಪ್ರತಿ ಒಂದು ಜೀವಿಗೂ ಅವಶ್ಯಕವಾದ ವಿಚಾರವಾಗಿದೆ. ಈ ಜಗತ್ತು ನಿಂತಿರುವುದೇ ಪರಸ್ಪರ ಹೊಂದಾಣಿಕೆಯ ಮೇಲೆ ಹೊಂದಾಣಿಕೆ ಇಲ್ಲದೆ ಹೋದಾಗ ಅಲ್ಲಿ ವಿನಾಶಕ್ಕೆ ಖಂಡಿತವಾಗಿಯೂ ಎಡೆ ಮಾಡಿಕೊಟ್ಟಂತೆ ಆಗುತ್ತದೆ.ಹೊಂದಾಣಿಕೆ ಮಾಡಿಕೊಂಡು ಮುಂದೆ ನಡೆದಾಗ, ಎಷ್ಟೋ ವಿಚಾರಗಳು ಸುಗಮವಾಗುತ್ತದೆ.

ಆದರೆ ಹೊಂದಾಣಿಕೆ ಎನ್ನುವುದು ಕೇವಲ ಏಕಮುಖ ಕ್ರಿಯೆಯಲ್ಲ, ಅದಕ್ಕೆ ಅರ್ಥ ಬರುವುದು ಪರಸ್ಪರ ಕ್ರಿಯೆ ಹಾಗೂ ಪ್ರತಿಕ್ರಿಯೆಯಿಂದ. ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬೇಕೆ ಹೊರತು, ಕೇವಲ ಬೇರೆಯವರಿಂದ ಹೊಂದಾಣಿಕೆಯ ನಿರೀಕ್ಷೆಯನ್ನು ಮಾಡುವುದು ತರವಲ್ಲ. ಹಾಗೆಯೇ ಹೊಂದಾಣಿಕೆ ಎನ್ನುವುದು ಬಹಳ ಸೂಕ್ಷ್ಮವಾದ ವಿಚಾರ ಕೂಡ ಆಗಿದೆ. ಹಲವಾರು ಬಾರಿ ಹೊಂದಾಣಿಕೆ ಎನ್ನುವುದು ಅನಿವಾರ್ಯ ವಿಚಾರವಾಗಿರುವ ಸಂದರ್ಭದಲ್ಲಿ, ಕಷ್ಟ, ನೋವು, ಅಪಮಾನ ಮುಂತಾದವುಗಳನ್ನು ಎದುರಿಸುವ ಪರಿಸ್ಥಿತಿಯು ಬರುತ್ತದೆ. ಹಾಗೆಯೇ ಹೊಂದಾಣಿಕೆ ಮಾಡಿಕೊಳ್ಳುತ್ತಾ ಹೋದರೆ ಕೆಲವು ಬಾರಿ ಹೊಂದಾಣಿಕೆಯೇ ಜೀವನವು ಆಗಿಬಿಡುತ್ತದೆ.

ಪ್ರತಿ ಬಾರಿಯೂ ನಮ್ಮ ಆಸೆ, ನಿರ್ಧಾರ, ನಮ್ಮ ವ್ಯಕ್ತಿತ್ವವನ್ನು ಅಡವಿಟ್ಟು ಮಾಡಿಕೊಳ್ಳುವ ಹೊಂದಾಣಿಕೆ ನಮಗೆ ಶ್ರೇಯಸ್ಸನ್ನು ನೀಡುವುದಿಲ್ಲ. ಹಾಗಾಗಿ ಎಷ್ಟರ ಮಟ್ಟಿಗಿನ ಹೊಂದಾಣಿಕೆ ಅವಶ್ಯಕ ಎನ್ನುವುದನ್ನು ಅರಿತು ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹಲವಾರು ಬಾರಿ ಸಣ್ಣಪುಟ್ಟ ಹೊಂದಾಣಿಕೆಯಿಂದ ದೊಡ್ಡ ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು.

ಕವಿ "ಜಿ ಎಸ್ ಶಿವರುದ್ರಪ್ಪ"ನವರು ತಮ್ಮ ಕವಿತೆಯಲ್ಲಿ ಹೇಳಿರುವಂತೆ "ಎಷ್ಟು ಕಷ್ಟವೋ ಹೊಂದಿಕೆ ಎಂಬುದು, ನಾಲ್ಕು ದಿನದ ಈ ಬದುಕಿನಲ್ಲಿ" ಎನ್ನುವ ಸಾಲುಗಳಲ್ಲಿ ಹೊಂದಾಣಿಕೆ ಎನ್ನುವುದು ಬಲು ಕಷ್ಟದ ವಿಚಾರ ಎನ್ನುವುದನ್ನು ಬಹಳ ಸುಂದರವಾಗಿ ತಿಳಿಸಿ ಹೇಳಿದ್ದಾರೆ.

ಇರುವುದು ನಾಲ್ಕೇ ದಿನವಾದರೂ, ಈ ಭೂಮಿಯ ಮೇಲೆ ನಮ್ಮ ಜೀವನ ಎಷ್ಟು ದಿನಗಳದ್ದು ಎಂಬ ಅರಿವಿಲ್ಲದೆ ಇದ್ದರೂ ಕೂಡ, ನಮ್ಮ ಅಹಂಕಾರ,ಕೋಪ, ಪ್ರತಿಷ್ಠೆ ನಮ್ಮನ್ನು ಹೊಂದಾಣಿಕೆಯಿಂದ ದೂರವಿರುವಂತೆ ಮಾಡುತ್ತಿದೆ. ಪ್ರೀತಿ ವಿಶ್ವಾಸ ಹೊಂದಾಣಿಕೆಗಿಂತ, ಅಧಿಕಾರ,ಐಶ್ವರ್ಯದ ಹಿಂದೆ ಬಿದ್ದು, ಮಾನವೀಯತೆಯಿಂದ ದೂರ ಸರಿದು ಹೋಗುತ್ತಿರುತ್ತೇವೆ. ಹಾಗೂ ಸಿಕ್ಕಿರುವುದನ್ನು ಬಿಟ್ಟು ಸಿಗದೇ ಇರುವುದಕ್ಕಾಗಿ ಪ್ರಯತ್ನಿಸುತ್ತಾ, ಬದುಕನ್ನು ದುಸ್ತರ ಮಾಡಿಕೊಳ್ಳುತ್ತಾ ಸಾಗುವ ಜೀವನ ನಮ್ಮದು ಎನ್ನುವ ಭಾವ ಸೂಚಿಸುವ ಕವನದಲ್ಲಿ ಹೊಂದಾಣಿಕೆಯ ಅವಶ್ಯಕತೆಯನ್ನು ಮನೋಜ್ಞವಾಗಿ ತಿಳಿಸಿದ್ದಾರೆ.

**– ಮಮತಾ ಶೃಂಗೇರಿ.**

### ಮೌಢ್ಯವಲ್ಲ ವಾಸ್ತವ

ಅಂಟಾರ್ಕ್ಟಿಕಾದಲ್ಲಿ ಶೀತ ಬೀಜ ಸಂಗ್ರಹ ಧಾರಕದ ಬಗೆ ಎಲ್ಲರೂ ಕೇಳಿರುತ್ತೀರಿ ಹಾಗೆ ಆಶ್ಚರ್ಯ ಸಹ ಪಟ್ಟಿರುತ್ತಿರಿ. ಆಧುನಿಕ ತಂತ್ರಜ್ಞಾನದ ಬಗೆ ಹೆಮ್ಮೆಯೂ ಅನಿಸಬಹುದು ಅಲ್ಲವೇ.

ಅಂಟಾರ್ಕ್ಟಿಕಾದಲ್ಲಿ –18ಅ ಡಿಗ್ರಿ ಸೆಲ್ಸಿಯಸ್ ಗಿಂತ ಕಡಿಮೆ ತಾಪಮಾನದಲ್ಲಿ 1,214,827 ವಿವಿಧ ಮಾದರಿಯ ಪ್ರಪಂಚದ ಮೂಲೆ ಮೂಲೆಗಳಿಂದ ಬೀಜಗಳನ್ನು ನವ ತಂತ್ರಜ್ಞಾನವನ್ನು ಬಳಸಿ ಶೇಖರಿಸಿ ಇಟ್ಟಿದ್ದಾರೆ .

ಭವಿಷ್ಯದಲ್ಲಿ ಪ್ರಾಕೃತಿಕ ವಿಕೋಪವಾದರೆ , ಇಲ್ಲ ಅಳಿವಿನ ಅಂಚಿಗೆ ಸಸ್ಯ ಗಿಡಗಳ ಪ್ರಭೇದವು ತಲುಪಿದರೆ ಮತ್ತೆ ಕಾಪಾಡಲು. ಈ ವಿಧಾನದಿಂದ ಬೀಜಗಳನ್ನು ಎಷ್ಟೇ ವರ್ಷಗಳಾದರೂ, ಏನೂ ತೊಂದರೆ ಆಗದ ಹಾಗೆ ಬೀಜಗಳ ಆರೈಕೆ ಮಾಡಬಹುದು.

ಈ ರೀತಿಯ ಯೋಚನೆ ಮಾಡಿರುವುದು ಇದೇ ಮೊದಲಲ್ಲ, ನಮ್ಮ ಪೂರ್ವಜರು, ರಾಜ ಮಹಾರಾಜರ ಕಾಲದಲ್ಲಿ ಈ ಕ್ರಮದ ಅನುಸರಣೆ ಇತ್ತು ಎಂದರೆ ನೀವೂ ನಂಬಲೆ ಬೇಕು.

ಅಧಿಕ ಸಂಖ್ಯೆಯಲ್ಲಿ ದೇವಸ್ಥಾನಗಳನ್ನು ಕಟ್ಟುತ್ತಿದ್ದ ರಾಜರ ಕಾಲದಲ್ಲಿ, ಗೋಪುರಗಳ ಮೇಲೆ ಕಲಶಗಳ ಸ್ಥಾಪನೆ ಮಾಡುತ್ತಿದ್ದರು.ಈ ಕಲಶಗಳನ್ನು ಲೋಹದಿಂದ ತಯಾರಿಸುತ್ತಿದ್ದರು. ಇದರ ಒಳಗೆ ದವಸ, ಧಾನ್ಯ, ಭತ್ತಗಳ ಸಂಗ್ರಹಣೆ ಸಹ ಮಾಡುತ್ತಿದ್ದರು.ಈ ಧಾನ್ಯಗಳನ್ನು ಬರಗಾಲದ ಸಮಯದಲ್ಲಿ ಜನಸಾಮಾನ್ಯರಿಗೆ ಹಂಚಲು,ಪ್ರಕೃತಿ ವಿಕೋಪಕ್ಕೆ ತುತ್ತಾದರೆ ಧಾನ್ಯಗಳ ಸಂರಕ್ಷಣೆಗೆಂದು ಶೇಖರಿಸುತ್ತಿದ್ದರು. ಇತಿಹಾಸದಲ್ಲಿ ರಾಜಮಹಾರಾಜರ ವೈಭವದ ಆಳ್ವಿಕೆಯು ಅವರು ಕಟ್ಟಿದ ದೇವಸ್ಥಾನಗಳ ಮೇಲೆ ನಿರ್ಧಾರವಾಗುತ್ತಿದ್ದವು. ದೇವಸ್ಥಾನಗಳು ಯಾತಕ್ಕೆ? ಕಲಶ, ಗೋಪುರಗಳ ಆರಾಧನೆ ಯಾತಕ್ಕೆ? ಎಂದು ಪ್ರಶ್ನೆ ಮಾಡುವ ಮುನ್ನ, ಅದರ ಹಿಂದಿನ ಅರ್ಥ ತಿಳಿದರೆ, ಪ್ರಶ್ನೆ ಕೇಳುವವರೇ ಉತ್ತರಿಸುವರು ಇದು ಯಾವುದು ಮೌಢ್ಯವಲ್ಲ ವಾಸ್ತವವೆಂದು.

**– ಮಂಜುಶ್ರೀ ಮುರಳೀಧರ್**
ತೋರಣಗಲ್ಲು, ಬಳ್ಳಾರಿ.

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com M: 9448633038

## ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ನಂತರ

# ನಮ್ಮ ಭವಿಷ್ಯ ನಮ್ಮ ಕೈಯಲ್ಲಿ

ಪ್ರತಿವರ್ಷದಂತೆ 2023–24ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಫಲಿತಾಂಶಗಳು ಕೆಲ ದಿನಗಳಲ್ಲಿ ಪ್ರಕಟವಾಗಲಿವೆ. ಫಲಿತಾಂಶದ ನಂತರ ಮಕ್ಕಳು ಮತ್ತು ಪೋಷಕರು ಗೊಂದಲಕ್ಕೆ ಸಿಲುಕುತ್ತಾರೆ. ಮುಂದಿನ ಹಂತದ ವಿದ್ಯಾಭ್ಯಾಸಕ್ಕೆ ಆಯ್ಕೆ ಮಾಡಿಕೊಳ್ಳಬೇಕಾದ ಸರಿಯಾದ ಕೋರ್ಸ್, ಕಾಲೇಜಿಗಾಗಿ ಅಲೆದಾಡಿ–ಪರದಾಡಿ ಸುಸ್ತಾಗುತ್ತಾರೆ. ಸರಿಯಾದ ಮಾಹಿತಿ ಸಿಗದಿರುವುದೇ ದೊಡ್ಡ ಸಮಸ್ಯೆ. ಪ್ರಸ್ತುತವಾಗಿ ಶಿಕ್ಷಣ ಬರೀ ಜ್ಞಾನಾರ್ಜನೆಗೆ ಒತ್ತು ನೀಡದೆ, ಅದು ಎಷ್ಟು ಬೇಗ ಕೆಲಸ ಗಿಟ್ಟಿಸುತ್ತದೆ ಎಂಬುದಕ್ಕೆ ಮಹತ್ವ. ಈ ಹಿನ್ನಲೆಯಲ್ಲಿ ಎಲ್ಲಾ ಕೋರ್ಸಗಳ ಲಾಭ ನಷ್ಟ ಕುರಿತು ಲೆಕ್ಕ ಹಾಕಲು ಆರಂಭದಲ್ಲೇ ಪ್ರಾರಂಭಿಸುತ್ತಾರೆ.

ಹಿಂದಿನ ದಿನಗಳಲ್ಲಿ ಈಗಿನಷ್ಟು ವೈವಿಧ್ಯಮಯ ಅವಕಾಶಗಳಿದ್ದಿಲ್ಲ. ಎಸ್.ಎಸ್.ಎಲ್.ಸಿ ನಂತರ ಪಿ.ಯು.ಸಿ, ಪದವಿ, ಡಿ.ಇಡಿ. ಅಥವಾ ಬಿ.ಇ.ಡಿ., ಎಂ.ಎ. ಎಂಬ ಒಂದು ಸರಣಿ, ಕಾನೂನು, ತಾಂತ್ರಿಕ ಪದವಿ, ವೈದ್ಯಕೀಯ ಕೋರ್ಸುಗಳತ್ತ ಎಲ್ಲರ ಆಸಕ್ತಿ. ಪ್ರಸ್ತುತ ಪರಿಸ್ಥಿತಿ ಬದಲಾಗಿದೆ. ಇಂದು ಹೆಜ್ಜೆ ಹೆಜ್ಜೆಗೂ ಅವಕಾಶಗಳ ಮಹಾಪೂರವೇ ಇದೆ. ಈ ಅವಕಾಶಗಳ ಮಾಯಾಮೃಗದಲ್ಲಿ ಯಾವುದರ ಬೆನ್ನು ಹತ್ತಬೇಕು ಎಂಬುದೇ ಅರ್ಥವಾಗುತ್ತಿಲ್ಲ.

ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇದ್ದರೆ ನಮ್ಮ ಆಯ್ಕೆಯನ್ನು ಸಮರ್ಪಕ ಎನ್ನುವ ರೀತಿಯಲ್ಲಿ ನಿಭಾಯಿಸಬಹುದು. ಹಣಪ್ರಪಂಚದಲ್ಲಿ ಇವೆಲ್ಲಾ ಸಾಮಾನ್ಯ. ನೆಂಟರಿಷ್ಟರಲ್ಲಿ, ಅಕ್ಕಪಕ್ಕದವರಲ್ಲಿ ತಾವೂ ಕಡಿಮೆ ಇಲ್ಲ ಎನ್ನುವ ಒಣ ಪ್ರತಿಷ್ಠೆ ಈ ಮನೋಭಾವದ ಬದಲಾವಣೆಗೆ ಬಹುಮುಖ್ಯ ಕಾರಣ. ಅದಕ್ಕಾಗಿ ಮತ್ತೊಬ್ಬರ ಅನುಕರಣೆಗೆ ಹೋಗಿ ನಮ್ಮ ತನವನ್ನು ಬಿಟ್ಟುಕೊಡದೆ, ನಮ್ಮ ಸಾಮರ್ಥ್ಯವನ್ನು ಅವಲಂಬಿಸಿ ಮುನ್ನುಗ್ಗಬೇಕು.

ರಾಜ್ಯದಾದ್ಯಂತ ಇರುವ, ವಿವಿಧ ಶಾಲಾಕಾಲೇಜುಗಳ ಬಗ್ಗೆ, ವೈವಿಧ್ಯಮಯ ಕೋರ್ಸಗಳ ಅಲೆದಾಡುವವರಿಗಾಗಿ ಸರಕಾರದ ಶಿಕ್ಷಣ ಇಲಾಖೆ, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆಗಳು ವಿವರವಾದ ಮಾಹಿತಿಯನ್ನು ತಮ್ಮ ಅಂತರಜಾಲ ತಾಣಗಳಲ್ಲಿ ಪ್ರಕಟಿಸಿವೆ. ಶಿಕ್ಷಣ ಮತ್ತು ಉದ್ಯೋಗ ಎಂಬ ಎರಡು ದೋಣಿಗಳಲ್ಲಿ ಒಟ್ಟಿಗೇ ಪ್ರಯಾಣಿಸಲು ಇಂದು ಎಲ್ಲರೂ ಬಯಸುತ್ತಾರೆ. ಹಿಂದೆ ಮೆಟ್ರಿಕ್ ಪಾಸಾದರೆ ಸಾಕು, ಯಾವುದೋ ಒಂದು ಕೆಲಸ ಸಿಗುತ್ತಿತ್ತು. ಇಂದಿನ ದಿನಗಳಲ್ಲಿ ಎಷ್ಟೇ ಉನ್ನತ ಪದವಿಗಳಿದ್ದರೂ, ಕೌಶಲಗಳಿದ್ದರೂ ನೌಕರಿ ಸಿಗುವುದು ಸುಲಭದ ಮಾತಲ್ಲ.

ಬರಹಗಾರರು ಮತ್ತು ಶಿಕ್ಷಣತಜ್ಞರಾದ ಬೇದ್ರೆ ಮಂಜುನಾಥ ಅವರು ಹೇಳುವುದೇನೆಂದರೆ "ಯಾವುದೇ ಕೋರ್ಸ್ ಆಯ್ದುಕೊಳ್ಳುವ ಮುನ್ನ ವಿದ್ಯಾರ್ಥಿಯನ್ನು ಸ್ವಾಟ್ ಅನಾಲಿಸಿಸ್‌ಗೆ (ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು, ಆತಂಕಗಳು – Strengths, Weaknesses, Opportunities, and Threats) ಒಳಪಡಿಸುವುದು ಸೂಕ್ತ. ಇದು ಆತನ/ಅಕೆಯ ವೈಯಕ್ತಿಕ ಶಕ್ತಿಸಾಮರ್ಥ್ಯಗಳನ್ನು ಒರೆಗೆ ಹಚ್ಚುವಂಥದ್ದು. ಪ್ರಚಂಡ ಇಚ್ಛಾಶಕ್ತಿಯ ಬಲದಿಂದ ಅಸಾಧ್ಯವಾದದ್ದನ್ನು ಕೂಡ ಸಾಧಿಸಲು ಸಾಧ್ಯ. ಅವಕಾಶಗಳು ಮತ್ತು ಆತಂಕಗಳು ಬಾಹ್ಯ ಅಂಶಗಳು. ತೀವ್ರತರ ಸ್ಪರ್ಧಾತ್ಮಕ ವಾತಾವರಣದಲ್ಲಿ ಅತ್ಯಂತ ಸಹಜವಾಗಿ ಎದೆಗುಂದಿಸುವಂಥವು. ಸಾಮರ್ಥ್ಯ ಮತ್ತು ಅವಕಾಶಗಳು ಒಂದು ಸಂಸ್ಥೆ ಅಥವಾ ವ್ಯಕ್ತಿಯ ಏಳಿಗೆಗೆ ನೆರವಾಗುವ ಅಂಶಗಳು. ಸ್ವಾಟ್‌ನಂತೆಯೇ ಸ್ಮಾರ್ಟ್ ಅನಾಲಿಸಿಸ್ (ನಿರ್ದಿಷ್ಟ, ಅಳತೆಗೆ ಸಿಗುವ, ಸಾಧಿಸಬಲ್ಲ, ನೈಜ, ಸಮಯಬದ್ಧ – Specific, Measurable, Achievable, Realistic, Timebounded) ಕೂಡ ಯಶಸ್ವೀ ಗುರಿ ನಿಗದಿಗೆ ಬಳಕೆಯಾಗುತ್ತಿದೆ. ಸುಮ್ಮನೇ ಸಮಯ ಹಾಳುಮಾಡುವುದು, ಕಾಡುಹರಟೆ ಹೊಡೆಯುವುದು, ಅಸಾಧ್ಯವಾದದ್ದನ್ನೆಲ್ಲಾ ಸಾಧಿಸುತ್ತೇನೆಂದು ಕನಸುಕಟ್ಟುವುದರಿಂದ ಯಶಸ್ಸು ಸಿಗುವುದಿಲ್ಲ " ಎಂಬ ಈ ಮಾತುಗಳು ಯಶಸ್ವಿ ಆಯ್ಕೆಯ ಸೂತ್ರಗಳಾಗಿವೆ.

ಎಸ್.ಎಸ್.ಎಲ್.ಸಿ ಮುಂದಿನ ಹೆಜ್ಜೆಗಳು ಎಸ್.ಎಸ್.ಎಲ್.ಸಿ. ನಂತರದ ಪಿ.ಯು.ಸಿ., ಪದವಿ, ಡಿಪ್ಲೊಮ, ಜೆ.ಒ.ಸಿ., ಐ.ಟಿ.ಐ., ಸ್ವಯಂ ಉದ್ಯೋಗ ತರಬೇತಿಗಳ ಮಾಹಿತಿ ನೀಡಲು 2006 ರಿಂದ ಎಲ್ಲಾ ಪ್ರೌಢಶಾಲೆಗಳಲ್ಲಿ ಮಕ್ಕಳಿಗೆ 'ದಾರಿದೀಪ – ಶೈಕ್ಷಣಿಕ ವೃತ್ತಿ ಮಾರ್ಗದರ್ಶನ' ತರಬೇತಿಯನ್ನು ನೀಡಲಾಗುತ್ತಿದೆ. ಅದಕ್ಕಾಗಿ ಒಂದು ಕೈಪಿಡಿಯನ್ನೂ ಸಿದ್ಧಪಡಿಸಲಾಗಿದೆ. ಮಕ್ಕಳಿಗೆ ವ್ಯಕ್ತಿತ್ವ, ಆತ್ಮವಿಶ್ವಾಸ, ಸಮಯದ ಮಹತ್ವ, ನಿರ್ಧಾರ ಕೈಗೊಳ್ಳುವಿಕೆ, ಯಶಸ್ಸಿನ ದಾರಿಗಳು, ಕ್ರಿಯಾಶೀಲತೆ ಮುಂತಾದವುಗಳ ಕುರಿತು ಈ ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ. ಎಸ್.ಎಸ್.ಎಲ್.ಸಿ. ನಂತರ ಮುಂದೇನು ಎಂಬ ಪ್ರಶ್ನೆಗೆ ಉತ್ತರ ನೀಡುವ ಪ್ರಯತ್ನ ಮಾಡಲಾಗಿದೆ. ಅದರಲ್ಲಿ ಎಸ್.ಎಸ್.ಎಲ್.ಸಿ. ನಂತರ ಶಿಕ್ಷಣದ ಕುರಿತಾಗಿ ಮಾರ್ಗದರ್ಶನವಿದೆ. ಹೆಚ್ಚಿನ ಮಾಹಿತಿಗೆ www.pue.kar.nic.in ಮತ್ತು www.dsert.kar.nic.in, www.schooleducation.kar.nic.in ಈ ಅಂತರ್ಜಾಲಗಳನ್ನು ಜಾಲಾಡಬಹುದು.

ಎಸ್.ಎಸ್.ಎಲ್.ಸಿ. ನಂತರದ ಪಿ.ಯು.ಸಿ. ಶಿಕ್ಷಣದಲ್ಲಿ ಕಲಾ



(ಆರ್ಟ್ಸ್) ವಿಷಯಗಳಲ್ಲಿ 36, ವಾಣಿಜ್ಯ ವಿಷಯಗಳಲ್ಲಿ 08 ಮತ್ತು ವಿಜ್ಞಾನ ವಿಷಯಗಳಲ್ಲಿ 7 (P C M B / P C M C / P C M E / P C M S / P C B HSc / P C M G / C B Ps HSc ), ಜೊತೆ ತಾಂತ್ರಿಕ ಶಿಕ್ಷಣದಲ್ಲಿರುವ ಮೂರು ವರ್ಷಗಳ ಡಿಪ್ಲೊಮಾ (26 ವಿವಿಧ ವಿಷಯಗಳು), ಪ್ಯಾರಾ ಮೆಡಿಕಲ್ ಡಿಪ್ಲೊಮಾ ಕೋರ್ಸ್ (6 ವಿಷಯಗಳು), ಒಂದು ವರ್ಷದ ಎ.ಎನ್.ಎಂ. ಸರ್ಟಿಫಿಕೇಟ್ ಕೋರ್ಸ್, ಅರೋಗ್ಯ ನಿರೀಕ್ಷಕರ ಕೋರ್ಸ್, ನರ್ಸಿಂಗ್ ಜನರಲ್ ಮತ್ತು ನರ್ಸಿಂಗ್ ಡಿಪ್ಲೊಮಾ, ಎರಡು ವರ್ಷಗಳ ಐ.ಟಿ.ಐ. (34 ವಿಷಯಗಳು) ತರಬೇತಿ ಅಲ್ಲದೇ ಅಲ್ಪಾವಧಿ ಮತ್ತು ದೀರ್ಘಾವಧಿಯ ಕ್ರಾಷ್ ಕೋರ್ಸ್‌ಗಳು ಲಭ್ಯವಿದೆ.

ಕರ್ನಾಟಕದ ಸುಮಾರು 521 ಪದವಿ ಪೂರ್ವ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣಕ್ಕೆ (ಜಾಬ್ ಓರಿಯಂಟೆಡ್ ಕೋರ್ಸ್? – ಜೆ.ಒ.ಸಿ.) ಅವಕಾಶ ಕಲ್ಪಿಸಲಾಗಿದ್ದು ಸುಮಾರು 92ಕ್ಕೂ ಹೆಚ್ಚು ವಿವಿಧ ವಿಷಯಗಳಲ್ಲಿ ಪದವಿ ಪೂರ್ವ ಶಿಕ್ಷಣಕ್ಕೆ ತತ್ಸಮಾನವಾದ ತರಬೇತಿ ನೀಡಲಾಗುತ್ತಿದೆ. ಕಂಪ್ಯೂಟರ್ ಸೈನ್ಸ್, ಮೆಕ್ಯಾನಿಕಲ್, ಡೈರಿ, ತೋಟಗಾರಿಕೆ, ಚರ್ಮ ಕೈಗಾರಿಕೆ, ಬೇಕರಿ, ಸಿನಿಮಾಟೋಗ್ರಫಿ ಇತ್ಯಾದಿ ತಾಂತ್ರಿಕ ತರಬೇತಿ ಜೊತೆಗೆ, ಕಲೆ, ಸೆಕ್ರೆಟೆರಿಯಲ್ ಪ್ರಾಕ್ಟೀಸ್ ನಂತಹ ಕೌಶಲ ತರಬೇತಿಗೂ ಅವಕಾಶ ಕಲ್ಪಿಸಲಾಗಿದೆ. ಆಯ್ಕೆ ನಿಮ್ಮಗಳ ಆಸಕ್ತಿಯನ್ನು ಅವಲಂಬಿಸಿದೆ.

## ಪಿ.ಯು.ಸಿ. ಮುಂದೆ ?. . .

ದ್ವಿತೀಯ ಪಿ.ಯು.ಸಿ.ಯಲ್ಲಿ ಪಡೆದ ಅಂಕಗಳು ಮತ್ತು ಒಲವಿರುವ ಕೋರ್ಸಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ವೈದ್ಯಕೀಯ ಅಥವಾ ತಾಂತ್ರಿಕಗಳಲ್ಲಿಯೇ ಸುಮಾರು ಮುನ್ನೂರಕ್ಕೂ ಹೆಚ್ಚು ವಿಷಯಗಳ ಕೋರ್ಸಗಳಲ್ಲಿ ಮನಸೋ ಇಚ್ಛೆ ಆಯ್ಕೆ ಮಾಡಿಕೊಳ್ಳಬಹುದು. ಪ್ರತಿಷ್ಠಿತ ಕಾಲೇಜುಗಳಿಗೆ ಸಿ.ಇ.ಟಿ., ಕಾಮೆಡ್–ಕೆ, ಐಐಟಿ, ಜೆಇಇ, ಎಐಇಇಇ, ಬಿಟ್‌ಸ್ಯಾಟ್, ನಾಟಾ, ಜೆಸ್ಟ್, ಸಿಪೆಟ್, ಸೀಡ್, ಸಿಫ್‌ನೆಟ್ ಮೊದಲಾದ ಸ್ಪರ್ಧಾತ್ಮಕ ಪ್ರವೇಶ ಪ್ರಕ್ರಿಯೆಯ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅವುಗಳನ್ನು ಗಮನಿಸಿ ವಿದ್ಯಾರ್ಥಿಗಳು ತಮ್ಮ ಆಸಕ್ತಿ ಕ್ಷೇತ್ರಗಳನ್ನು ಆರಿಸಿಕೊಳ್ಳಬಹುದು. ಇದರ ಕುರಿತ ಅಂಶಗಳಿಗಾಗಿ http://cet.kar.nic.in , http://dte.kar.nic.in, www.admissions.org.in , http://karnatakaeducation.gov.in/ ನೋಡಬಹುದು.

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು ತಮ್ಮ ವ್ಯಾಪ್ತಿಯ ಕಾಲೇಜುಗಳಲ್ಲಿ ಕಲೆ, ವಾಣಿಜ್ಯ, ವಿಜ್ಞಾನ, ಲಲಿತಕಲೆ, ದಶ್ಯಕಲೆ, ಮುದ್ರಣ, ಮಾಹಿತಿ ತಂತ್ರಜ್ಞಾನ, ಅನ್ವಯಿಕ ವಿಷಯಗಳ ಕುರಿತು ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ಸಂಶೋಧನೆ, ಡಾಕ್ಟರೇಟ್ ಸೇರಿದಂತೆ ವಿವಿಧ ವಿಷಯಗಳ ಅಧ್ಯಯನಕ್ಕೆ ಅವಕಾಶಗಳಿವೆ. ಸಾಮಾನ್ಯ ವಿಜ್ಞಾನದ ಆಯ್ಕೆಯಲ್ಲಿಯೂ ಸುಮಾರು 90 ವಿವಿಧ ವಿಷಯಗಳಿದ್ದು 3 ವರ್ಷದ (6 ಸೆಮಿಸ್ಟರ್) ಪದವಿ ಇಲ್ಲವೇ 5 ವರ್ಷಗಳ ಇಂಟಿಗ್ರೇಟೆಡ್ ಪಿ.ಜಿ. ಕೋರ್ಸ್ ಸೇರಲು ಅವಕಾಶಗಳಿವೆ. ಹಾಗೆಯೇ ವಾಣಿಜ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಬಿ.ಕಾಂ., ಬಿ.ಬಿ.ಎಂ., ಎಂಬಿ.ಎ., ಸಿ.ಎ., ಸಿ.ಎಫ್.ಎ., ಸಿ.ಡಬ್ಲ್ಯು.ಎ., ಸಿ.ಎಸ್., ಮೊದಲಾದವುಗಳಿಗೆ ಬೇಡಿಕೆ ಹೆಚ್ಚಾಗಿದೆ. ಕಲೆಯ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದುಕೊಂಡು ಬಂದಿರುವ ಭಾಷೆ ಮತ್ತು ಇತರೆ ಐಚ್ಛಿಕ ವಿಷಯಗಳ ಕಲಾ ಪದವಿ, ಸ್ನಾತಕೋತ್ತರ ಪದವಿಗಳಿಗೆ ಈಗ ಹೊಸ ವಿಷಯಗಳೂ ಸೇರಿವೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಪತ್ರಿಕೋದ್ಯಮ, ಫೋಟೋ–ಜರ್ನಲಿಸಂ, ಫ್ಯಾಶನ್ ಡಿಸೈನಿಂಗ್, ಕ್ರಿಮಿನಾಲಜಿ ಮತ್ತು ನ್ಯಾಯಿಕ ವೈದ್ಯಶಾಸ್ತ್ರ, ಮಾಧ್ಯಮ ಅಧ್ಯಯನ, ದೂರಶಿಕ್ಷಣ, ಆಹಾರ ಸಂಸ್ಕರಣೆ, ಮತ್ಸ್ಯೋದ್ಯಮ, ಹರಳು ಮತ್ತು ಆಭರಣಗಳ ವಿನ್ಯಾಸ ಇತ್ಯಾದಿ ವಿಷಯಗಳು ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳಿಸಿವೆ. ಕಂಪ್ಯೂಟರ್ ಎಂಬ ಮಾಯಾಲೋಕ ತಂತ್ರಾಂಶ ಮತ್ತು ಯಂತ್ರಾಂಶಗಳ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿದ್ದು ಖಾಸಗಿಯಾಗಿಯೂ ನೂರಾರು ಕೋರ್ಸ್‌ಗಳನ್ನು ಕಲಿತು, ಕಲಿಸಿ ಉದ್ಯೋಗ ಗಿಟ್ಟಿಸಿಕೊಳ್ಳಲು ಅವಕಾಶಗಳನ್ನು ಒದಗಿಸಿದೆ. ದೃಶ್ಯ ಮಾಧ್ಯಮಗಳಲ್ಲಿ ದೊರೆಯುತ್ತಿರುವ ವಿಪುಲ ಅವಕಾಶಗಳಿಂದಾಗಿ ಚಿತ್ರಕಲೆ, ಗ್ರಾಫಿಕ್ಸ್, ವೆಬ್ ಡಿಸೈನಿಂಗ್, ಅನಿಮೇಶನ್ ಮೊದಲಾದ ಕಲೆಯ ಮಾಧ್ಯಮಗಳಿಗೆ ಬೇಡಿಕೆ ಅಧಿಕವಾಗುತ್ತಿದೆ. ಹಲವು ಪ್ರತಿಷ್ಠಿತ ಗ್ಯಾಲರಿಗಳಲ್ಲಿ ಇತ್ತೀಚೆಗೆ ವಾರಾಂತ್ಯದ ತರಬೇತಿ ತರಗತಿಗಳೂ, ಕ್ರಾಷ್ ಕೋರ್ಸ್‌ಗಳು ಏರ್ಪಾಡಾಗುತ್ತಿವೆ. ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್, ಅಪ್ಲೈಡ್ ಆರ್ಟ್ಸ್ ಮತ್ತು ಕಲಾ ಇತಿಹಾಸ ವಿಭಾಗಗಳಿದ್ದು, ಸ್ನಾತಕೋತ್ತರ ಡಿಪ್ಲೊಮ ಕೋರ್ಸಗಳನ್ನು ನಡೆಸಲಾಗುತ್ತಿದೆ. (http://www.chitrakalaparishath.org/) ಅನಿಮೇಶನ್ ಮತ್ತು ಗ್ರಾಫಿಕ್ ಡಿಸೈನಿಂಗ್ ಕಲಿತವರು ಕೈತುಂಬಾ ಸಂಬಳ ಪಡೆಯುತ್ತಿರುವುದು ಆ ಕ್ಷೇತ್ರದ ಕಡೆಗೆ ಒಲವು ಹೆಚ್ಚಾಗಿದೆ.

ತಾಂತ್ರಿಕ ಶಿಕ್ಷಣಕ್ಕೆ ಒತ್ತು ದೊರೆಯುತ್ತಿ ರುವುದರಿಂದ ಎಂಜಿನಿಯ ರಿಂಗ್‌ನಲ್ಲಿ ಮೆರೀನ್ ಜಿಯಾಲಜಿಯಿಂದ ಆಸ್ಟ್ರೋಫಿಸಿಕ್ಸ್‌ವರೆಗೆ ಹಲವು ಕೋರ್ಸ್‌ಗಳಿವೆ. ಪ್ರತಿಷ್ಠಿತ ಕಾಲೇಜುಗಳಿಗೆ ಸ್ಪರ್ಧಾತ್ಮಕ ಪ್ರವೇಶ ಪ್ರಕ್ರಿಯೆಯ ಮೂಲಕ ಆಯ್ಕೆ ನಡೆಸಲಾಗುತ್ತಿದೆ. ಕಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ಅರಣ್ಯ ಶಾಸ್ತ್ರ ವಿಷಯಗಳೂ ಕೂಡ ಈಗ ತಾಂತ್ರಿಕ ತರಬೇತಿಗೆ ಸೇರಿರುವುದರಿಂದ ಅಲ್ಲಿಯೂ ಪ್ರವೇಶಕ್ಕೆ ಹೆಚ್ಚು ಜನರು ಆಸಕ್ತಿ ತೋರಿಸುತ್ತಿದ್ದಾರೆ.

ಉನ್ನತ ವಿದ್ಯಾಭ್ಯಾಸಕ್ಕೆ ಸರ್ಕಾರ ಹಾಗೂ ಖಾಸಗಿ ವಲಯದ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಯ ಅನ್ವಯ ಬೃಹತ್ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿದ್ದು ಅವುಗಳಲ್ಲಿ ಪ್ರವೇಶ ಪಡೆಯಲು ವಿವಿಧ ರೀತಿಯ ಪ್ರವೇಶ ಪರೀಕ್ಷೆ, ಸಂದರ್ಶನಗಳನ್ನು ಎದುರಿಸಬೇಕಾದ ಅಗತ್ಯವಿದೆ. ಕೆಲವು ಸಂಶೋಧನಾಲಯಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಮತ್ತು ನೌಕರಿಯನ್ನು ಕೂಡ ನೀಡಲಾಗುತ್ತದೆ. ದ್ವಿತೀಯ ಪಿ.ಯು.ಸಿ.(10+2) ಅಥವಾ ಪದವಿ ಮುಗಿಸಿದ ಅಭ್ಯರ್ಥಿಗಳು ಈ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಲೇ ಸೇವೆಸಲ್ಲಿಸಬಹುದು.

ಭಾರತದಲ್ಲಿರುವ ಪ್ರಮುಖ ಉನ್ನತ ಶಿಕ್ಷಣ ಸಂಸ್ಥೆಗಳ ಜಾಲತಾಣಗಳನ್ನು ನೋಡುವುದಾದರೆ:– ಆಲ್ ಇಂಡಿಯ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ನವದೆಹಲಿ www.aiims.edu, ಆರ್ಮ್ಡ್ ಫೋರ್ಸಸ್ ಮೆಡಿಕಲ್ ಕಾಲೇಜ್, ಪುಣೆ www.afmc.nic.in, ಸೆಂಟ್ರಲ್ ಎಲೆಕ್ಟ್ರೋಕೆಮಿಕಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಕಾರೈಕುಡಿ www.cecri.res.in, ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಫಿಶರೀಸ್ ನಾಟಿಕಲ್ & ಇಂಜಿನಿಯರಿಂಗ್ ಟ್ರೈನಿಂಗ್, ಕೊಚ್ಚಿ http://cifnet.nic.in, ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಪ್ಲಾಸ್ಟಿಕ್ಸ್ ಇಂಜಿನಿಯರಿಂಗ್ & ಟೆಕ್ನಾಲಜಿ, ಚೆನ್ನೈ www.cipet.gov.in, ಚೆನ್ನೈ ಮ್ಯಾಥಮೆಟಿಕಲ್ ಇನ್ಸ್ಟಿಟ್ಯೂಟ್, ಸಿರುಸೆರಿ www.cmi.ac.in, ಇಂಗ್ಲಿಷ್ & ಫಾರಿನ್ ಲಾಂಗ್ವೇಜಸ್ ಯೂನಿವರ್ಸಿಟಿ, ಹೈದರಾಬಾದ್ www.ciefl.ac.in, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್, ಅಹಮದಾಬಾದ್ www.iimahd.ernet.in, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ & ಟೆಕ್ನಾಲಜಿ, ತಿರುವನಂತಪುರಂ www.iist.ac.in, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೂರಿಸಂ & ಟ್ರಾವೆಲ್ ಮ್ಯಾನೇಜ್ಮೆಂಟ್, ನವದೆಹಲಿ www.iittm.org, ಇನ್ಸ್ಟಿಟ್ಯೂಟ್ ಆಫ್ ಹೊಟೆಲ್ ಮ್ಯಾನೇಜ್ಮೆಂಟ್, ನೊಯ್ಡಾ www.nchmct.org, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ & ನ್ಯೂರೋ ಸೈನ್ಸಸ್, ಬೆಂಗಳೂರು, www.nimhans.kar.nic.in, ಯೂನಿವರ್ಸಿಟಿ ಆಫ್ ಪೆಟ್ರೋಲಿಯಂ & ಎನರ್ಜಿ ಸ್ಟಡೀಸ್, ಡೆಹ್ರಾಡೂನ್ www.upesindia.org ಇತ್ಯಾದಿಗಳು.

## ಫೇಲ್ ಆದವರಿಗೂ ಅಪರಿಮಿತ ಅವಕಾಶಗಳಿವೆ. .

ಇವೆಲ್ಲಾ ಬರೀ ಪಾಸಾದವರಿಗೆ ಆದರೆ ಫೇಲಾದವರು ನಾವೇನು ಮಾಡಬೇಕು ಎಂದು ತಲೆ ಮೇಲೆ ಕೈ ಹೊತ್ತು ಕೂರುವ ಅಗತ್ಯವಿಲ್ಲ. ಅವರೂ ಕೂಡಾ ವಿವಿಧ ಕೇಂದ್ರ ಸರಕಾರದ ವೃತ್ತಿಪರ ಕೌಶಲ್ಯ ವಿಭಾಗವು ರೂಪಿಸಿರುವ ಸುಮಾರು 1600ಕ್ಕೂ ಹೆಚ್ಚು ವಿಭಾಗಗಳಲ್ಲಿ ತರಬೇತಿ ಪಡೆದು, ಕೇಂದ್ರ ಸರಕಾರದ ಎನ್.ಸಿ.ಟಿ.ವಿ. ಪ್ರಮಾಣ ಪತ್ರ ಪಡೆದು ಉದ್ಯೋಗ ಗಿಟ್ಟಿಸಬಹುದು. ಅವುಗಳಲ್ಲಿ ಪ್ರಮುಖವಾದವೆಂದರೆ ಹೊಲಿಗೆ, ಸಿದ್ಧ ಉಡುಪಗಳ ತಯಾರಿಕೆ, ಬ್ಯೂಟಿ ಪಾರ್ಲರ್, ಕಂಪ್ಯೂಟರ್–ಡಿ.ಟಿ.ಪಿ., ಮರಗೆಲಸ, ಗಾರೆಗೆಲಸ, ಪ್ಲಂಬರ್, ಇಂಗ್ಲೀಷ್ ಸ್ಪೀಕಿಂಗ್ ಕೋರ್ಸ್, ಖಾತೆ ನಿರ್ವಹಣೆ ಮತ್ತು ಲೆಕ್ಕ ವಿಭಾಗ, ವಿದ್ಯುತ್ ಮೋಟಾರ್ ರೀವೈಂಡಿಂಗ್, ರೇಡಿಯೋ–ಟಿ.ವಿ. ರಿಪೇರಿ, ಮನೆಯಲ್ಲೇ ತಯಾರಿಸಬಹುದಾದ ವಸ್ತುಗಳು, ಫೋಟೋಗ್ರಫಿ, ವೀಡಿಯೋಗ್ರಫಿ, ಕೃಷಿ, ಹೈನುಗಾರಿಕೆ, ನೇಯ್ಗೆ, ಗುಡಿ ಕೈಗಾರಿಕೆಗಳಲ್ಲಿ ಯಶಸ್ಸು ಕಾಣುವವರಿಗೆ ಉತ್ತಮ ವೇದಿಕೆ ನಿರ್ಮಿಸುತ್ತವೆ. ಇವುಗಳ ಕುರಿತಾಗಿ ಧರ್ಮಸ್ಥಳದ ರುಡ್ ಸೆಟ್ ಸಂಸ್ಥೆ, ಜೆ.ಎಸ್.ಡಬ್ಲೂ ಫೌಂಡೇಶನ್, ತೋರಣಗಲ್ಲಿನ ಓ.ಪಿ.ಜೆ ಸೆಂಟರ್ (08395–242343) ಇತ್ಯಾದಿಗಳಲ್ಲಿ ಮಾಹಿತಿ ಮತ್ತು ತರಬೇತಿ ಪಡೆದು ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಬಹುದು.

## ಪತ್ರಿಕೆ, ಪುಸ್ತಕಗಳಲ್ಲಿ ಮಾಹಿತಿಲಭ್ಯ

ವಿವಿಧ ದಿನ ಪತ್ರಿಕೆಗಳ ಶೈಕ್ಷಣಿಕ ವಿಶೇಷಾಂಕಗಳು, ಮಲಯಾಳಂ ಮನೋರಮಾದವರ 'ಡೈರೆಕ್ಟರಿ ಆಫ್ ಹೈಯರ್ ಎಜುಕೇಷನ್–2023', ಖಾಸಗಿ ಪ್ರಕಾಶನಗಳ 'ಡೈರೆಕ್ಟರಿ ಆಫ್ ಹೈಯರ್ ಎಜುಕೇಷನ್', 'ಎಜು–ಛಾಯ್ಸ್', 'ಕರ್ನಾಟಕ ಎಜುಕೇಷನ್ ಡೈರೆಕ್ಟರಿ' ಮೊದಲಾದ ಬೃಹತ್ ಕೋಶಗಳು ನಮ್ಮ ರಾಜ್ಯದಲ್ಲಿರುವ ವಿವಿಧ ಶಾಲಾ–ಕಾಲೇಜುಗಳನ್ನು ಮತ್ತು ಅಲ್ಲಿ ಲಭ್ಯವಿರುವ ಹಲವು ಕೋರ್ಸಗಳ ಕುರಿತು ಮಾಹಿತಿ ನೀಡುತ್ತವೆ. ಜಯಂತಿ ಘೋಷ್ ಅವರ 'ಹಾರ್ಪರ್ ಕೋಲಿನ್ಸ್ – ಎನ್ಸೈಕ್ಲೊಪಿಡಿಯಾ ಆಫ್ ಕೆರೀರ್ಸ್' ಕೃತಿಯಲ್ಲಿ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಪಠ್ಯಕ್ರಮ ವಿವರಗಳ ಜೊತೆ ಹತ್ತಾರು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ವಿಳಾಸಗಳ ಜೊತೆ ವೃತ್ತಿಕ್ಷೇತ್ರಕ್ಕೆ ಹೇಗೆ ಪ್ರವೇಶ ಗಿಟ್ಟಿಸಿಕೊಳ್ಳಬಹುದು ಎಂಬ ವಿವರಗಳಿವೆ. ಕೋರ್ಸಗಳು, ತರಬೇತಿ ಕೇಂದ್ರಗಳು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು, ವಿದೇಶಿ ವಿಶ್ವವಿದ್ಯಾಲಯಗಳ ಸ್ಟಡಿ ಸೆಂಟರ್‌ಗಳು, ತರಬೇತಿ ವಿಷಯಗಳ ವಿವರಗಳ ಜೊತೆ ಶೈಕ್ಷಣಿಕ ಸಾಲ ದೊರೆಯುವ ಬಗ್ಗೆಯೂ ಮಾಹಿತಿ ಇಲ್ಲಿ ಲಭ್ಯ. ಒಮ್ಮೆ ಕಣ್ಣಾಡಿಸಿದಲ್ಲಿ ಓದಿನ ಪಯಣದ ಹಾದಿ ನಿರ್ಧರಿಸುವುದು ಸಂತಸ–ಸುಲಭವಾಗುತ್ತದೆ.

## ವಿದ್ಯಾಭ್ಯಾಸಕ್ಕೆ ಸಾಲ ?

ಶಿಕ್ಷಣಕ್ಕೆ ನಮ್ಮ ದೇಶದಲ್ಲಿ ಮಾನ್ಯತೆ ಹೆಚ್ಚುತ್ತಿರುವ ಫಲವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು, ಖಾಸಗೀ ಬ್ಯಾಂಕ್‌ಗಳು ವಿವಿಧ ಯೋಜನೆ ಅಡಿಯಲ್ಲಿ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಸಾಲ ನೀಡುತ್ತಲಿವೆ. ಕಾಲೇಜಿನ ಶುಲ್ಕ, ಪಠ್ಯ ಪುಸ್ತಕ, ಕಂಪ್ಯೂಟರ್/ಲ್ಯಾಪ್‌ಟಾಪ್ ವೆಚ್ಚ, ಊಟ–ವಸತಿ ಖರ್ಚುಗಳನ್ನು ಗಮನಿಸಿ ಅತಿ ಕಡಿಮೆ ಧರದಲ್ಲಿ ಸಾಲ ನೀಡುವ ಸೌಲಭ್ಯವಿದೆ. 10 ಸಾವಿರ ರುಪಾಯಿಯಿಂದ 25 ಲಕ್ಷ ರುಪಾಯಿಗಳ ವರೆಗೂ ವಿವಿಧ ಶರತ್ತುಗಳ ಆಧಾರದ ಮೇಲೆ ಸಾಲ ಪಡೆಯಬಹುದು. ಆಸಕ್ತರು www.statebankofmysore.co.in, http://www.bankofindia.com/, http://www.indianbank.com/, http://www.statebankofmysore.co.in/, http://www.syndicatebank.in/, http://www. unionbankofindia.co.in/, http://www. unitedbankofindia.com/, http://www. vijayabank.com/ ಈ ತರಹದ ಬ್ಯಾಂಕ್‌ಗಳ ಜಾಲತಾಣಗಳಲ್ಲಿ ಹುಡುಕಾಡಬಹುದು.

ಕವಿ ಮನಸು

## ಸ್ವಪ್ನ ಸುಂದರಿ



ಮಣ್ಣಿನ ಮಡಕೆಯ ಹೊತ್ತಳು ನಾರಿ
ನದಿಯೆಡೆ ಹಿಡಿದಳು ತನ್ನಯ ದಾರಿ
ಮನೆಯಲಿ ಕುಡಿಯಲು ಶಾರೆ ನೀರಿಲ್ಲ
ನದಿ ಕಡೆ ಹೋಗಲು ದಾರಿ ಸರಿ ಇಲ್ಲ

ಸಿಕ್ಕಿದ ಸೀರೆಯ ಅವಸರದಿ ಉಟ್ಟಿಹಳು
ಬಿರ ಬಿರ ನದಿ ಕಡೆ ಹೆಜ್ಜೆಯ ಹಾಕಿದಳು
ಕಾಡಲು ಮನದಲಿ ಕೆಲವು ನೆನಪುಗಳು
ರವಿಕೆಯ ತೋಡುವುದ ಮರೆತಿಹಳು

ಜುಳು ಜುಳು ಎನ್ನುವ ಜಲಜೆಯ ಗಾನ
ಕರೆದೊಯ್ದಿತು ಎಲ್ಲಿಗೋ ಇವಳ ಮನ
ಕನಸನು ಕಾಣುತಾ ನಡೆಯಿತು ಪಯಣ
ಮರೆತು ಹೋಯಿತೇ ತಾ ಬಂದ ಕಾರಣ

ಸೃಷ್ಟಿಯ ಸೊಬಗಿನ ಸರಳ ಸುಂದರಿಯೆ
ಸ್ವಪ್ನ ಲೋಕಕೆ ನೀ ಹೋಗುವುದು
ಸರಿಯೇ
ಮಡಕೆಯ ತುಂಬಿಸಿ ಮನೆ ಕಡೆ ನಡಿಯೇ
ಸಂಜೆಯಾಗಿದೆ ಚಂದ್ರನ ನಡೆ ನಿನ್ನ ಕಡೆ

– **ಕೆ ಎಂ ಬಸವರಾಜ** ಹೊಸಪೇಟೆ

## ಮಾಲೆ



ಮನಸುಗಳ
ಪೋಣಿಸಿ ಮಾಡಬೇಕು
ಸ್ನೇಹದ ಮಾಲೆ

ಕಷ್ಟಗಳನ್ನು
ದಹಿಸಿ ಪಡೆಬೇಕು
ಜಯದ ಮಾಲೆ

ನಗುವ ಮಾಲೆ
ವದನದಿ ಇದ್ದರೆ
ಜೀವಕೆ ಬೆಲೆ

– **ಕಾಡಜ್ಜಿ ಮಂಜುನಾಥ**

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– **ಜಾಹೀರಾತು ವ್ಯವಸ್ಥಾಪಕರು.**

# ಬಾಲ್ಯ ಕಾಪಿಡುವ ಅತ್ತಿ ಹಣ್ಣು

ಹಳ್ಳಿಯಲ್ಲಿ ಬೆಳೆದ ನಮ್ಮ ಜನರೇಷನ್ ಗೆ ಇವತ್ತಿನ ಮಕ್ಕಳಿಗೆ ಸಿಗುವ ಹಣ್ಣು ಹಂಪಲು ತಿಂಡಿ ತಿನಿಸುಗಳು ತಿನ್ನಲು ಇರಲಿ ನೋಡಲು ಸಹ ಸಿಗುತ್ತಿರಲಿಲ್ಲ. ನಮಗೆ ಶಾಲಾ ವಿರಾಮದ ಸಮಯದಲ್ಲಿ ಅಕ್ಕಪಕ್ಕದ ತೋಟಗಳಿಗೆ ನುಗ್ಗಿ ಅಥವಾ ಬೇಲಿಗಳ ಮೇಲೆ ಸಿಗುವ ಹಣ್ಣುಗಳೇ ಅಮೂಲ್ಯ ತಿನಿಸುಗಳಾಗಿದ್ದವು. ಅವುಗಳನ್ನು ಪಡೆಯಲು ನಾವು ಹರ ಸಾಹಸ ಮಾಡುತ್ತಿದ್ದೆವು. ಊರ ಹೊರಗೆ ಅಥವಾ ಶಾಲೆಯ ಪಕ್ಕದಲ್ಲಿ ಇರುವ ಹಣ್ಣಿನ ಮರಗಳನ್ನು ಗುರ್ತು ಇಟ್ಟುಕೊಂಡು ಬಿಡುವಿನ ವೇಳೆಯಲ್ಲಿ ಅಲ್ಲಿಗೆ ಓಡುತ್ತಲೇ ಮರದ ಜೊತೆ ಹಣ್ಣಿಗಾಗಿ ಸೆಣಸಾಟ ನಡೆಯುತ್ತಿತ್ತು.

ನಮ್ಮ ತಿನಿಸುಗಳಾದರೂ ಯಾವುವು ಅಂತೀರಾ. ಹುಣಸೆ ಕಾಯಿ/ಹಣ್ಣು, ಮಾವಿನ ಕಾಯಿ, ಬಾಲುಣಿಸೆ, ಬಾರಿ ಹಣ್ಣು, ಚಳ್ಳೆ ಹಣ್ಣು, ಬಿಕ್ಕಿ ಹಣ್ಣು, ಕವಳೆ ಕಾಯಿ, ಕಾರಿ ಹಣ್ಣು, ಸೂರ್ಯಕಾಂತಿ ಬೀಜ, ಪೇರಲಕಾಯಿ, ಅತ್ತಿ ಹಣ್ಣು,ಯಾವಾಗಲಾದರೂ ಕೈಯಲ್ಲಿ ಕಾಸಿದ್ದಾಗ ಕಡ್ಡಿ ಐಸ್, ಬಹದ್ದೂರ್ಗುಂಡು(ಬೆಲ್ಲದಿಂದ ಮಾಡಿದ್ದ) ನಿಂಬೆ ಹುಳಿ ಪೆಪ್ಪರ್ಮೆಂಟ್, ಸಂಡಿಗೆ(ಐದು ಪೈಸೆಗೆ ಎರಡು ಕೊಳವೆ) ಬಟಾಣೆ ನಮ್ಮ ಪ್ರತಿ ನಿತ್ಯದ ತಿಂಡಿಗಳು.

ಮನೆಯಲ್ಲಿ ರೊಟ್ಟಿಯ ಹೊರತು ಬೇರೇನು ಊಟ ಇರುತ್ತಿರಲಿಲ್ಲ, ಹಾಗಂತ ನಮಗೆ ನಿರೀಕ್ಷೆಗಳು ಇರುತ್ತಿರಲಿಲ್ಲ. ಜೋಳದ ರೊಟ್ಟಿ ಮುಖ್ಯ ಆಹಾರ, ಅಹಾರ ಅಂದ್ರೆ ಅದೇ ಅದಕಿದಕೆದಕೂ... ಅಂದ್ರೆ ಅದಕೆ ಜೋಡು ಎನೂ ಅಗಿರಬಹುದು. ಅವ್ವ ಒಲೆಯಲ್ಲಿ ಸುಟ್ಟ ಬದನೆಕಾಯಿ ಚಟ್ನಿ, ಹಸಿ ಮೆಸಿನಕಾಯಿ ಚಟ್ನಿ, ಗುರೆಳ್ಳುಪುಡಿ, ಮೊಸರು( ಇದು ನಮಗೆ ದುಬಾರಿ ಪದಾರ್ಥ), ಅಥವಾ ನಿರು ಮಜ್ಜಿಗೆಯಲ್ಲಿ ಚಿಟಿಕೆ ಉಪ್ಪುಹಾಕಿ ರೊಟ್ಟಿ ಮುರಿದು ನೆನೆಸಿಟ್ಟ ರೊಟ್ಟಿ, ಅದಾವುದೂ ಆಗದಿದ್ದರೆ ಅತೀ ಅಚ್ಚು ಮೆಚ್ಚಿನ ಈರುಳ್ಳಿ(ಸಣ್ಣಗೆ ಹೆಚ್ಚಿ ಉಪ್ಪು ಕಾದರಪುಡಿ, ಅದರ ಮೇಲೆ ಉದುರಿಸಿ ಮೂರು ನಾಲ್ಕು ರೊಟ್ಟಿ ತಿಂದರೆ ಬೇರ್ಯಾವ ಪದಾರ್ಥವನ್ನು ಬಡ ಸಂತೃಪ್ತ ಜೀವ ಬಯಸುತ್ತಿರಲಿಲ್ಲ. ಒಮ್ಮೊಮ್ಮೆ ಇದಾವುದೂ ಇರದಿದ್ದರೂ ನಮ್ಮ ಬೇಲಿ, ಕಾಡು ನಮ್ಮನ್ನು ಕೈ ಬಿಡುತ್ತಿರಲಿಲ್ಲ.. ಆದರೆ ನಾವು ತಿನ್ನುತ್ತಿದ್ದ ಶುದ್ಧ ಜವಾರಿ ತಿನಿಸುಗಳೀಗ ಅದರ ಹೈಬ್ರಿಡ್ ನಮ್ಮ ಮಕ್ಕಳಿಗೆ ಲಭ್ಯ ಇವೆ. ನಾವು ತಿಂದ, ತಿನ್ನುತ್ರಿದ್ದ ಮೇಲಿನ ಯಾವ ತಿನಿಸುಗಳು ಈಗ ನಮ್ಮ ಮಕ್ಕಳಿಗೆ ಲಭ್ಯವಿಲ್ಲ, ಇದ್ದರೂ ಅವರಿಗೆ ಗೊತ್ತಿಲ್ಲ, ಕಾರಣ ನಮಗಿದ್ದ ಹಸಿವನ್ನು ತಣಿಸುವ ಸವಾಲು ಅವರಿಗಿಲ್ಲ.

ಮೇಲೆ ಹೆಸರಿಸಿದ ಹಣ್ಣುಗಳ ಪೈಕಿ ಅತ್ತಿ ಹಣ್ಣಿನ ಮರಗಳು ಕಡಿಮೆ. ಆದರೂ ಹಣ್ಣನ್ನು ಹುಡುಕಿಕೊಂಡು ಅಲೆಯಿತ್ತುದ್ದೆವು. ಅದರೂ ಅವನ್ನು ನೊಡಿದ ನೆನಪು ಕಡಿಮೆಯೇ ಅದರೆ ತಿಂದ ನೆನಪು ಮಾತ್ರ ಭಾರೀ ಜೋರು.ಕನಿಷ್ಟ ವರುಷಕ್ಕೊಮ್ಮೆಯಾದರೂ ಈ ಹಣ್ಣನ್ನು ತಿನ್ನಲೇಬೇಕು ಎನ್ನುವುದು ನಮ್ಮ ಹಿರಿಯರ ಕಡ್ಡಾಯ ಅಂಬೋಣ. ಬಾರೀ ಬಿಕ್ಕಿ ಮತ್ತು ಅತ್ತಿ ಹಣ್ಣುಗಳನ್ನು ನಮ್ಮೂರ ತಾಂಡಾದಿಂದ ಮಾರಲು ಬರುತ್ತಿದ್ದ ಸೀತಮ್ಮ ನಮಗೆ ಅಚ್ಚು ಮೆಚ್ಚು. ವಯಸ್ಸಾದ ಆಕೆ ಸಣ್ಣ ಬುಟ್ಟಿಯಲ್ಲಿ ಅಯಾ ಸೀಸನ್ನಿನ ಹಣ್ಣುಗಳನ್ನು ಮಾರುವುದರಿಂದಲೇ ಆಕೆ ಹೊಟ್ಟೆ ಹೊರೆಯುತ್ತಿದ್ದಳು. ಆಕೆಯ ಹತ್ತಿರ ಜೋಳಕ್ಕೆ ಬದಲಾಗಿ ಹಣ್ಣುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದೆವು. ಅವ್ವ ಮನೆಯವರ ಹಸಿವಿಗೆ ತಂದಿಟ್ಟ ಜೋಳದಲ್ಲಿ ಒಂದು ಬೊಗಸೆ ಜೋಳವನ್ನು ಹಾಕಿಕೊಂಡ ಪ್ರಾಕಿನ ತುದಿಯಲ್ಲೇ ದುಂಡಗೆ ಹಿಡಿದು ಸೀತಮ್ಮನ ಬಳಿ ಓಡುತ್ರಿದ್ದೆವು. ಆಕೆಯ ಜೊತೆ ಜಗಳ ಕಾಯುತ್ತಲೇ ಅಕೆ ಕೊಟ್ಟ ಹಣ್ಣನ್ನು ತಂದು ಮನೆಯ ಮೋಲೆಯಲ್ಲಿ ಕುಳಿತು ತಿಂದರೆ ಆ ದಿನ ಪೂರ್ತಿ ತೃಪ್ತಿ.

ಅಪ್ಪ ಮೆದುವಾದ ಅತ್ತಿ ಹಣ್ಣನ್ನು ಎರಡು ಕೈಯಿಂದ ಎರಡು ಹೋಳು ಮಾಡಿ ಜಲ್ದಿ ಬಾ ಗುಬ್ಬವ್ವ(ಅಪ್ಪ ಪ್ರೀತಿಯಿಂದ ಕರೆಯುತ್ತಿದ್ದುದು ಹಾಗೆ) ಕಣ್ ಮುಚ್ಕೊಂಡ್ ತಿನ್ನು ಅನ್ನುತ್ತಿದ್ದನು. ನಾನು ಹಾಗೆ ಕಣ್ ಮುಚ್ಕೊಂಡೆ ಬಾಯಿ ತೆರೆದರೆ ಅಪ್ಓ ಬಾಯಿಗಿಡುತ್ತಿದ್ದ ಹಣ್ಣನ್ನು ತಿಂದು ನಾನೆ ತಿನ್ನುತ್ತೇನಪ್ಪಾ ಎಂದರೆ ಕೊಡುತ್ರಿರಲಿಲ್ಲ. ನಾವ್ ಕಣ್ಬಿಟ್ಕೊಜಡು ತಿನ್ನುವ ಹಣ್ಣಲ್ಲ ಅದು. ಕಾರಣ ಅದರಲ್ಲಿ ಚಿಕ್ಕ ಕಣಜಿಗ(ಹುಳುಗಳು) ಇರುವುದರಿಂದ ನೊಡಿದರೆ ಖಂಡಿತ ತಿನ್ನುವುದಿಲ್ಲ.ಆದರೆ ಅವನ್ನು ಹಾಗೆ ತಿನ್ನಬೇಕು ಎನ್ನುವುದು ಅಪ್ಪನ ಆದೇಶ. ಕಾರಣ ಹಾಗೆ ತಿನ್ನುವುದರಿಂದ ಕಣ್ಣು(ಬೇನೆ) ಬರುವುದಿಲ್ಲವಂತೆ. ಅದಕ್ಕಾಗಿ ಕಡ್ಡಾಯವಾಗಿ ಆ ಹಣ್ಣನ್ನು ಆ ಹಣ್ಣಿನ ಸುಗ್ಗಿ ಮುಗಿಯುವತನಕ ತಿನ್ನಲೇಬೇಕು ಕಣ್ಣು ಮುಚ್ಚಿಕೊಂಡು.



ಈ ಕಣ್ಣು ಬರೋದು ಅಂದ್ರ ಇವತ್ತು ಗೊತ್ತಾಗಲ್ಲ ನಾವು ಮಕ್ಕಾಗಿದ್ದಾಗ ಪ್ರತಿ ವರುಷ ಕರೆಯದ ಅತಿಥಿ ಯಂತೆ ಮಾವು ಬೇವಿನ ಹಣ್ಣಿನ ಸುಗ್ಗಿಯಲ್ಲಿ ಇದು ಕಡ್ಡಾಯ ವಾಗಿತ್ತು. ಕಣ್ ಬಂದ್ವು ಅಂದ್ರೆ ಮುಗಿತು ಕಣ್ಣೆಲ್ಲಾ ಕೆಂಪಗಾಗಿ ಊತ ಬಂದು ಗಾಳಿ ಸೋಕಿದರೆ ಕಣ್ತುಂಬಾ ನೀರು ತುಂಬಿಕೊಳ್ತಿದ್ವು.ಕಣ್ಣಲ್ಲಿ ಸೂಜಿ ಚುಚ್ಚಿದ ಅನುಭವ, ಅದರ ಗಾಳಿ ಸೊಂಕಿದರೆ ಪಕ್ಕದವರಿಗೂ ಪಸರಿಸಿಬಡುತ್ತಿತ್ರು. ರಾತ್ರಿ ಮಲಗಿ ಮುಂಜಾನೆ ಎದ್ದರೆ ಕಣ್ಣಿನ ಮೇಲಿನ ರೆಪ್ಪೆಯೊಜದಿಗೆ ಕೆಳ ರೆಪ್ಪಯನ್ನು ಜೊಡಿಸಿ ಹೊಲಿದಂತೆ ಮುಚ್ಚಿಕೊಂಡಿರುತ್ತಿದ್ದವು. ಕಣ್ಣಲ್ಲಿ ಪಿಚ್ಚು ಬಜದು ಒಣಗಿ ಎರಡು ರೆಪ್ಪೆಗಳನ್ನು ಗಟ್ಟಿಯಾಗಿ ಹಿಡಿದಯ ಬಿಡುತ್ತುದ್ದವು. ಅಗ ಅವ್ವನಿಗೆ ನೀರು ಕಾಯಿಸಿ ಕೊಡುವ ಕೆಲಸ. ಕಾರಣ ಬಿಸಿ ನಿರಿನಲ್ಲಮೆದುವಾದ ಬಟ್ಟೆ ಅದ್ದಿ ಅದರಿಂದ ಅಂಟಿಕೊಂಡಿರುವ ಎರಡು ರೆಪ್ಪೆಗಳನ್ನು ಒದ್ದೆ ಮಾಡಿ ಬಿಡಿಸುವುದು ಮತ್ತೊಜದು ಕೆಲಸ ಆಕೆಗೆ. ಎಷ್ಟೊ ಹೊತ್ತು ಹಾಗೆ ಒರೆಸಿದ ನಂತರ ಕಣ್ಣು ತೆರೆದುಕೊಳ್ಳುತ್ತುದ್ದವು. ಬಲವಂತದಿಜದ ಬಿಡಿಸಿಕೊಳ್ಳಲು ಹೋದರೆ ಮೆಲಿನ ರೆಪ್ಪೆಯೊಂದಿಗೆ ಕೆಳ ರೆಪ್ಪೆ, ಕೆಳ ರೆಪ್ಪೆಯೊಂದಿಗೆ ಮೇಲಿನ ರೆಪ್ಪೆ ಕಿತ್ತುಕೊಂಡು ಹೋಗುವಷ್ಟು ಬಿಗಿಯಾದ ಬಂಧವದು.

ಅತ್ತಿ ಅಥವಾ ಔದುಂಬರ ಮರ ಪೂರ್ತಿ ಖನಿಜಾಂಶಗಳಿಂದ ಕೂಡಿದ್ದು ಮರದ ತೊಗಟೆ, ಎಲೆ, ಹಣ್ಣು ಎಲ್ಲವೂ ಮನುಷ್ಯನ ದೇಹಕ್ಕೆ ಬೇಕಾದ ಬಹು ಮುಖ್ಯ ಔಷಧಿ ಗುಣ ಹೊಂದಿವೆ ಎನ್ನುವುದೇ ಅ ಹಣ್ಣನ್ನು ತಿನ್ನಲು ಮುಖ್ಯ ಕಾರಣ. ಕೆಲವೊನ್ಮೆ ಇತರ ಹಣ್ಣುಗಳ ಮುಂದೆ ಅವು ಸಪ್ಪೆ ಎನ್ನಿಸಿ ತಿನ್ನಲು ಹಿಂದೇಟು ಹಾಕಿದರೆ ಹಿಂದೆಯೇ ಕಣ್ ಬರುವ, ಬಂದಾಗ ಕಣ್ಣು ಕೆಂಪಗೆ ಊದಿಕೊಂಡು ನೀರು ಸೋರುತ್ತಾ ನರಳುತ್ತಾ ಮನೆಯಲ್ಲಿ ಮುಚ್ಚಿಕೊಂಡು ಮಲಗುವುದನ್ನು ಊಹಿಸಿಕೊಂಡು ತಿನ್ನುತ್ತಿದ್ದೆನು. ಅದರೂ ಆಗೆಲ್ಲಾ ವರುಷಕ್ಕೊಮ್ಮೆಯಾದರೂ ಕಣ್ ಬಂದೇ ಬರುತ್ತಿದ್ದವು, ಅನುಭವಿಸುತ್ತಿದ್ದೆವು.

ಒಮ್ಮೆಯಂತೂ ಕಣ್ ಬಂದು ಮತ್ತು ಈವರೆಗೂ ಕಣ್ ಬಾರದಿದ್ದುದನ್ನು ಯಾವತ್ತೂ ಮರೆಯುವಂತಿಲ್ಲ. ಹೀಗೆ ಪ್ರತಿ ವರ್ಷದ ಬೇಸಿಗೆ ರಜೆಯಲ್ಲಿ ದೊಡ್ಡಪ್ಪನ ಊರಿಗೆ ಹೊಗುವಂತೆ ಆ ವರ್ಷವೂ (ಪ್ರಾಯಶಃ ಏಳನೇ ತರಗತಿಲ್ಲಿದ್ದೆ)ಹೋಗಿದ್ದು ಆಕಸ್ಮಿಕವಾಗಿ ಈ ಕಣ್ ಬಂದದ್ದು, ಅದೇ ದಿನ ಹಗರಿಬೊಮ್ಮನಹಳ್ಳಿಯ ತೇರು ಇದ್ದದ್ದು, ನಾನು ಕಣ್ ಬಂದುದಕ್ಕೆ ತೇರು ನೊಡಲು ಸಾಧ್ಯವಿಲ್ಲ ಎಂದು ಮರುಗುತ್ತಾ ಮಲಗಿದಾಗ ನನ್ನ ಅತ್ತಿಗೆ (ಬಹುಶಃ ಆಗ ಹ' ರಿ ಗ' ಆಗಿತ್ತ) ನನ್ನ ಬಳಿ ಪ್ರೀತಿಯಿಂದ ಬಂದು ಮೈದಡವಿ ಏನಾಯ್ತು ಕಂದಾ ಎನ್ನುತ್ತಾ ತಾವು ಕೈಯಲ್ಲಿ ಹಿಡಿದು ತಂದಿದ್ದ ದಪ್ಪನೆಯ ಒಣ(ಕೆಂಪು) ಮೆಣಸಿನ. ಕಾಯಿ ತುದಿಯನ್ನು ಮುರಿದು ಅದರೊಳಗಿನ ಬೀಜ ವನ್ನೆಲ್ಲಾ ಇಸುಕಿ ಹೊರ ಚೆಲ್ಲಿ ಅದರಲ್ಲಿ ಮೊಲೆ ಹಾಲನ್ನು ಹಿಂಡಿ ಪ್ರಿತಿಯಿಂದ ತೊಡೆ ಮೇಲೆ ಮಲಗಿಸಿಕೊಂಡು ಎರಡು ಕಣ್ಣಲ್ಲಿ ಮೆಣಸಿನಕಾಯಿಯಲ್ಲಿ ತುಂಬಿದ ಹಾಲನ್ನು ಒಂದೊಂದು ಹನಿ ಹಾಕಿದರು ಅಷ್ಟೇಏಎ....

ಒದ್ದಾಡುತ್ತಾ ಕಿರುಚುತ್ತಾ ಯಾವಾಗ ನಿದ್ದೆ ಅತ್ತಿತೋ ಗೊತ್ತಿಲ್ಲ ಎದ್ದಾಗ ನನ್ ಕಣ್ಣಿಗೆ ಏನೂ ಆಗೆ ಇಲ್ಲ ಅನ್ನುವಷ್ಟು ಸ್ವಚ್ಛವಾಗಿದ್ದವು. ಬೇಗ ಎದ್ದು ಹೋಳಿಗಿ ಉಂಡು ತೇರು ನೊಡು ಹೋಗು ಕಂದಾ ಎಂದರು ಅತ್ತಿಗೆ. ನನಗೆ ಎಲ್ಲಿಲ್ಲದ ಅಚ್ಚರಿ. ಸಾಮಾನ್ಯವಾಗಿ ಕಣ್ ಬಂದರೆ ವಾರದತನಕ ನರಳುತ್ತಿದ್ದೆ. ಈ ಬಾರಿ ಅರ್ಧ ದಿನಕ್ಕೆ ಕಣದಣು ಸ್ವಚ್ಛವಾಗಿದ್ದವು . ಮತ್ತೆ ಅತ್ತಿ ಹಣ್ಣು ತಿನ್ನುವದನ್ನು ಯಾವತ್ತೂ ಬಿಡಲಿಲ್ಲ. ಮತ್ತೊಂದು ಅಚ್ಚರಿ ಅಂದರೆ ಅಲ್ಲಿಂದ ಇಲ್ಲಿಯವರೆಗು ಕಣ್ ಬಂದಿಲ್ಲ.

ಇವತ್ತಿಗೆ ಅತ್ತಿ ಹಣ್ಣು ಮಾಯವಾಗಿ ಅದರ ಸ್ಥಾನದಲ್ಲಿ ಅಂಜೂರತ್ತಿ ಹಣ್ಣು ವಿರಾಜಿಸುತ್ತಿದೆ.

ವಿಶೇಷವೆಂದರೆ ನಮ್ಮ ಮನೆಯ ಪಕ್ಕದಲ್ಲಿ ಹಾಳು ಮನೆಯಲ್ಲಿ ಅತ್ತಿ ಮರ ಬೆಳೆದಿದೆ, (ಪಟದಲ್ಲಿರುವುದು ಅದೇ) ವರುಷಪೂರ್ತಿ ಹಣ್ಣು, ಕಾಯಿ,ಚಿಗುರು ಇಲ್ಲಾ ಹೂವಿನಿಂದ ಕಂಗೊಳಿಸುತ್ತದೆ. ನಾನು ನೊಡಿದಂತೆ ಒಂದು ವರ್ಷದಲ್ಲಿ ನಾಲ್ಕೈದು ಬಾರಿ ಹಣ್ಣು ಆಗಿದೆ.

ಮರದಡಿಯಲ್ಲಿ ಒಡಾಡುವುದೇ ಒಂದು ಅನುಭೂತಿ. ಅದರ ಪರಿಮಳ ಆಕರ್ಷಿಸುತ್ತದೆ. ಈಗ ಒಂದೆರಡು ವರ್ಷದಿಂದ ಅದನ್ನು ಗಮನಿಸುತ್ತಿದ್ದೇನೆ. ಮಕ್ಕಳನ್ನು ಏರಿಸಿ ಹಣ್ಣು ಕಿತ್ತು ತಿನ್ನುತ್ತಾ ಅಕ್ಕ ಪಕ್ಕದ ಮನೆಯವರುಗೂ ಕೊಡುವುದು ಒಟ್ಟಿಗೆ ತಿನ್ನುವುದು ಮತ್ತೆ ಮತ್ತೆ ಬಾಲ್ಯ ಮೆಲಕು ಹಾಕುವಂತಾಗಿದೆ.

– **ಭಾರತಿ ಅಶೋಕ್**
**ಹೊಸಪೇಟೆ**

# ಮೋಹಿನಿ ಕೆರೆ

ರಜತ್ ತನ್ನ ಗೆಳೆಯರ ಜೊತೆ ಬೆಂಗಳೂರು ಸಿಟಿಯಲ್ಲಿ ರೂಮ್ ಮಾಡಿ ಓದುತ್ತಿದ್ದ. ಓದು ಮುಗಿದ ನಂತರ ಅಲ್ಲೆ ಒಂದು ಸಣ್ಣ ಕೆಲಸ ಗಿಟ್ಟಿಸಿಕೊಂಡ.


ಶರಣ್ ಮತ್ತು ರಜತ್ ಆತ್ಮೀಯ ಗೆಳೆಯರು.

ಇಬ್ಬರು ಒಂದೆ ಕಡೆ ಕೆಲಸ ಮಾಡುತ್ತಿದ್ದರು. ಶರಣ್ ಮದುವೆ ಸೆಟ್ಟಾಯಿತು. ಅವನು ತನ್ನ ಗೆಳೆಯರಿಗೆ ಲಗ್ನ ಪತ್ರಿಕೆ ಕೊಟ್ಟು ಊರಲ್ಲಿ ನನ್ನ ಮದುವೆ. ಖಂಡಿತಾ ನೀವು ಎಲ್ಲರೂ ಬರ್ಲೆ ಬೇಕು. ಹಳ್ಳಿಯಾಗಿರುವುದರಿಂದ ನೀವು ಊರು ತಲುಪಿದ ನಂತರ ಫೋನ್ ಮಾಡಿ. ಗಾಡಿ ಕಳುಹಿಸುತ್ತೇನೆ 'ಅಥವಾ' ನಾನೇ ಬರುತ್ತೇನೆ. ನೀವೆಲ್ಲರೂ ಬರಲೇ ಬೇಕು ದೂರದ ಹಳ್ಳಿ ಯಾರು ಇವನ ಮದುವೆಗೆ ಹೋಗ್ತಾರೆ ಅಂತ ಬರದೆ ಇದ್ದರೆ ನಾನು ನಿಮ್ಮ ಜೊತೆಗೆ ಮಾತನಾಡುವುದಿಲ್ಲವೆಂದ. ಮತ್ತೊಮ್ಮೆ! ಎಲ್ಲ ಗೆಳೆಯರ ಕರೆದು ಊರಿಗೆ ಹೋದ.

ಶರಣ್ ಮದುವೆಗೆ ಹೋಗಲು ತುದಿಗಾಲಲ್ಲಿ ನಿಂತ ರಜತ್. ಕೆಲಸದಲ್ಲಿ ಸಮಸ್ಯೆ ಬಂದು ಯಾರು ಬಾರದೆ ರಜತ್ ಒಬ್ಬನೆ ಊರಿಗೆ ಗೆಳೆಯನ ಮದುವೆಗೆ ಹೊರಡುವಂತಾಯಿತು.

ರಜತ್ ನು ಶರಣ್ ನ ಹಳ್ಳಿ ಕಡೆ ಹೋಗುವ ಕೊನೆಯ ಗವರ್ನಮೆಂಟ್ ಬಸ್ ಹತ್ತಿ ಕುಳಿತ . ಬೆಳಗಿನ ಜಾವ ಮೂರು ಘಂಟೆಗೆ ಬಂದು ತಲುಪಿದ.

ಬಸ್ ಸ್ಟಾಪ್ ನಿಂದ ಮತ್ತೇ 15 ಕಿ.ಮೀ ಮುಂದೆ ಶರಣ್ ಮನೆ. ಹಳ್ಳಿ ಮನೆ ತಲುಪಲು ಬಸ್ ಸ್ಟಾಪ್ ನ ಹತ್ತಿರ ಯಾವುದೇ ಆಟೋ ಗಳು ಇರಲಿಲ್ಲ. ರಜತ್ ಗೆಳೆಯನಿಗೆ ಫೋನಚ್ಚಿದ. ಹಲೋ.. ಶರಣ್ ನಾನು ಸಾಗರದಲ್ಲಿದ್ದೀನಿ .



ಸುವರ್ಣಾ ಭಟ್ಟ
ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

'ಓಹ್' ಗೆಳೆಯ ಒಂದು ನಿಮಿಷ ಈಗ ಬಂದೆ ಎಂದನು ಶರಣ್ . ಹಾಗೇ ಮಾಡಿದನು ಕೂಡ ರಜತ್ ಗೆ ಆಶ್ಚರ್ಯ ಆಯಿತು. 15 ಕಿ.ಮೀ ದೂರದ ಮನೆಯಿಂದ ಇಷ್ಟು ಬೇಗ ಇವನು ಹೇಗೆ ಬಂದ ಎಂದು.

ರಜತ್ "ಶರಣ್ ಇಷ್ಟು ಬೇಗ ಹೇಗೆ ಬಂದೆ !".

ಶರಣ್ ' ಗೆಳೆಯ ಮದುವೆಗೆ ಹೂವಿನ ಹಾರ ತರಲು ಬಂದಿದ್ದೆ'. ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ನಿನ್ನ ಫೋನ್ ಕಾಲ್ ಬಂತು . ಸರಿ ಹೊರಡೋಣವಾ? ಕೇಳಿದ.

ಸರಿ ಎಂದು ಗೆಳೆಯನ ಬೈಕ್ ಹತ್ತಿ ಕುಳಿತ ರಜತ್.

ಗಾಡಿಯಲ್ಲಿ ಹೂವಿನ ಹಾರಗಳೇ ಇರಲಿಲ್ಲ ರಜತ್ ಏನೋ ಕೇಳಬೇಕೆಂದುಕೊಂಡವನು ಆದರೆ ಏನು ಮಾತನಾಡುವುದು ಬೇಡ ಗೆಳೆಯ ಸಿಟ್ಟಾಗುತ್ತಾನೆಂದು ಸುಮ್ಮನೆ ಕುಳಿತ. ಗಾಡಿ ಮುಂದೆ ಚಲಿಸಿತು.

ಶರಣ್ ಮನೆ ಹೋಗುವ ದಾರಿ ಮಧ್ಯ ಮೋಹಿನಿ ಕೆರೆ ಸಿಗುತ್ತಿತ್ತು . ಕೆರೆ ಸಮೀಪ ಬಂದಾಗ ಜೋರಾಗಿ ಗಾಳಿ ಬೀಸಲಾರಂಭಿಸಿತು. ರಜತ್ ಹೆದರಲಾರಂಭಿಸಿದ . ಆಗ ಶರಣ್ ಹೆದರ ಬೇಡ ಗೆಳೆಯ ತುಂಬಾ ವರ್ಷಗಳ ಕೆಳಗೆ ನಮ್ಮ ಊರಿನಲ್ಲಿ ಸುಂದರ ಯುವತಿ ಇದ್ದಳು ಅವಳೇ 'ಮೋಹಿನಿ' .ನಮ್ಮೆಲ್ಲರ ಪ್ರೀತಿಯ ಅಕ್ಕ. ಆದರೆ ಕಾಮುಕರ ಆಟಕ್ಕೆ ಬಲಿಯಾದ ಹೆಣ್ಮಗಳಿವಳು. ಒಂದು ದಿನ ಅವಳು ಕ್ಲಾಸ್ ಮುಗಿಸಿಕೊಂಡು ಕಾಲೇಜ್ ನಿಂದ ಬಸ್ ಸ್ಟಾಪ್ ಗೆ ಬರುವಾಗ ತಡವಾಗಿ ಊರಿನ ಕಡೆ ಹೋಗುವ ಎಲ್ಲ ಬಸ್ಸುಗಳು ಹೋಗಿ ಆಗಿತ್ತು. ಯಾವುದೇ,ವಾಹನ ಸಿಗದೆ ಕಾಲ್ನಡಿಗೆಯಲ್ಲಿ ಬಂದಳು ಮೋಹಿನಿ. ಈ ಕೆರೆಯ ಸಮೀಪ ಕೆಲಸವಿಲ್ಲದ ನಾಲ್ಕು ಪುಂಡರು ಇವಳನ್ನು ನೋಡಿ ರೇಗಿಸಿದರು. ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರು ವಿಫಲವಾಗಿ ಕಾಮುಕರ ಕಾಮದಾಟಕ್ಕೆ ಬಲಿ ಆದಳು. ತಮ್ಮ ಕೆಲಸ ಮುಗಿಸಿ ನಾಲ್ವರು ಅವಳನ್ನು ಈ ಕೆರೆಯಲ್ಲಿ ಮುಳುಗಿಸಿ ಕೊಂದರು.

ಅಮವಾಸ್ಯೆಯಂದು ಇಲ್ಲಿ ಜೋರಾಗಿ ಅಳುವ ಸದ್ದು ಕಾಪಾಡಿ ...ಕಾಪಾಡಿ.. ಎಂದು ಕೂಗುವ ಹೆಣ್ಣಿನ ಧ್ವನಿ ಕೇಳಿಸುತ್ತದೆಂದು ಹಳ್ಳಿಯ ಜನರು ಮಾತನಾಡಿಕೊಳ್ಳುತ್ತಾರೆ. ನಂತರದ ದಿನಗಳಲ್ಲಿ, ಅವಳಿಗೆ ತೊಂದರೆ ನೀಡಿದ ಆ ನಾಲ್ವರ ಬಾಯಿಂದ ಊರಿನವರ ಮುಂದೆ ಸತ್ಯ ಹೊರಹಾಕಿಸಿ ತಾನೇ ವಿಚಿತ್ರ ರೀತಿಯಲ್ಲಿ ಅವರನ್ನೆಲ್ಲ ಕೊಂದಳು ಮೋಹಿನಿ.





ಅಂದಿನಿಂದ ನಮ್ಮ ಹಳ್ಳಿ ಜನರು ರಾತ್ರಿ ಸಂಚಾರ ಕಡಿಮೆ ಮಾಡಿದರು. ಆವಾಗಿನಿಂದ ಈ ಕೆರೆ ಮೋಹಿನಿ ಕೆರೆ ಎಂದು ಪ್ರಸಿದ್ಧಿ ಹೊಂದಿತು . ಹೀಗೆ ಶರಣ್ ಹೇಳುತ್ತಲೆ ಹೋದ. ಹಿಂದೆ ಕುಳಿತ ರಜತ್.... ಶರಣ್ ನ ಮಾತುಗಳನ್ನು ಕೇಳಿ ಬೆವರಲಾರಂಭಿಸಿದ.

ಕೆರೆಯಿಂದ ಸ್ವಲ್ಪ ದೂರ ಹೋದ ನಂತರ ಒಂದು ಕಡೆ ಜೋರಾಗಿ ಹೊಗೆ ಬರುತ್ತಿತ್ತು. ರಜತ್ ಗೆಳೆಯನ ಭುಜ ಹಿಡಿದು ಅಲ್ಲಾಡಿಸಿ ಏನೋ ಇದು ಎಂದನು. ಓಹ್ ಗೆಳೆಯ ಅದಾ ಸ್ಮಶಾನ ಎಂದನು ಶರಣ್ . ಏನು? ಸ್ಮ...ಶಾ..ನಾ..ನಾ ! ಎಂದು ಜೋರಾಗಿ ಕಿರುಚಿಕೊಂಡ ರಜತ್. ಹೇಯ್ ಏನಾಯ್ತೋ ಯಾಕೆ ಕಿರುಚಿಕೊಂಡೆ ಎಂದು ಗಾಡಿ ನಿಲ್ಲಿಸಿ ಹಿಂದೆ ತಿರುಗಿದ ಶರಣ್.

ಹಿಂದೆ ಗಡ ಗಡ ನಡುಗುತ್ತಾ ಕುಳಿತಿದ್ದ 'ರಜತ್'.

ನನಗೆ ಹೆದರಿಕೆ ಆಗ್ತೀದೆ 'ಪ್ಲೀಸ್' ಬೇಗ ಮನೆಗೆ ನಡೆ ಎಂದನು ರಜತ್ . ಸರಿ ಗೆಳೆಯ ಹೆದರ ಬೇಡ ನೀನು. ಬೇಗ ಮನೆಗೆ ಹೋಗುವ ಇನ್ನು ಸ್ವಲ್ಪ ದೂರ ಅಷ್ಟೇ! ಎಂದ ಶರಣ್.

ಮನೆ ಹತ್ತಿರ ಬರುತ್ತಿದ್ದಂತೆ ಗಾಡಿ ನಿಲ್ಲಿಸಿದ ಶರಣ್. ಗಾಡಿ ಪಕ್ಕದ ಮನೆ ಅಣ್ಣನದು ನಾ ಆತನಿಗೆ ಕೀ ಕೊಟ್ಟು ಬರುವೆ ಅದೋ.. ಅಲ್ಲಿ ಕಾಣಸ್ತಾ ಇದೆಯಲ್ಲಾ ಅದೇ ನಮ್ಮಮನೆ. ನೀನು ಹೋಗಿರು ಎಂದ. ಸರಿ ಎಂದು ಬ್ಯಾಗು ಹೆಗಲಿಗೇರಿಸಿ ಮುನ್ನಡೆದ ರಜತ್.

ಮನೆಯ ಮುಂದೆ ಬರುತ್ತಿದ್ದಂತೆ ಜನರ ಸುಳಿವೆ ಇಲ್ಲ . ಅರೇ ಇಂದು ಶರಣ್ ಮದುವೆ. ಈ ಮನೆಗೆ ಮದುವೆಯ ಮನೆ ಕಳೆ ಇಲ್ಲ. ನೆಂಟರು, ಬಂಧುಗಳೆಂದು ಒಂದು ನರಪಿಳ್ಳೆಯು ಕಾಣಿಸುತ್ತಿಲ್ಲವಲ್ಲ ಎಂದು ಯೋಚಿಸುತ್ತಾ ರಜತ್ ಮನೆ ಬಾಗಿಲು ಬಡಿದ. ಯಾರು? ಇದೋ ಬಂದೆ ಎನ್ನುತ್ತಾ ಒಬ್ಬ ಗಂಡಸು ಬಾಗಿಲು ತೆರೆದ .

ಮನೆಯ ಒಳಗಿನ ಮಂದ ಬೆಳಕಿನಲ್ಲಿ ಸರಿಯಾಗಿ ಮುಖ ಕಾಣಿಸಲಿಲ್ಲ. ಆದರೂ ಶರಣ್ ತಂದೆ ಇರಬಹುದು ಎನ್ನುವ ನಂಬಿಕೆಯಿಂದ ಅಂಕಲ್ ನಾನು ರಜತ್ ನಿಮ್ಮ ಮಗ ಶರಣ್ ಗೆಳೆಯ ಎಂದನು. ಓ ಬಾಪ್ಪ! ಒಳಗೆ ಎಂದರು.

ಕೆಲ ಸಮಯವಾದರು ಶರಣ್ ಮನೆಗೆ ಬರಲಿಲ್ಲ. ಅಂಕಲ್ ಶರಣ್ ಇನ್ನು ಮನೆಯೊಳಗೆ ಬರಲಿಲ್ಲವಲ್ಲ ಎಲ್ಲಿಗೆ ಹೋದ. ಒಮ್ಮೆ! ನೋಡಿ ಬರ್ತೀನಿ ಎಂದು ಎದ್ದು ನಿಂತ ರಜತ್. ಆಗ ಶರಣ್ ತಂದೆ ಇನ್ನೆಲ್ಲಪ್ಪ ಶರಣ್ .. ಎಂದರು.

ಯಾಕ್ ಅಂಕಲ್ ? ಏನಾಯಿತು. ಈಗ ಅವನ ಜೊತೆಗೆ ನಾನು ಬಂದೆ. ಏನೊಂತಾ ಬಿಡಿಸಿ ಹೇಳಿ ಎಂದ.

ಏನು ಅಂತ ಹೇಳ್ಲಪ್ಪ. ಮದುವೆ ಕೆಲಸಗಳೆಲ್ಲ ಆತನ ಒಬ್ಬನ ಹೆಗಲ ಮೇಲೆ ಬಿತ್ತು. ಸರಿಸುಮಾರು ರಾತ್ರಿಯವರೆಗೂ ಕೆಲಸಮಾಡಿ ನಿದ್ರೆಯಿಲ್ಲದೆ ಎರಡು ದಿನಗಳ ಹಿಂದೆ ಗಾಡಿಯಲ್ಲಿ ತಡರಾತ್ರಿ ಬರುವಾಗ ಗಾಡಿ ಸ್ಕಿಡ್ ಆಗಿ ಬಿದ್ದು ತಲೆಗೆ ಬಲವಾದ ಏಟು ಬಿದ್ದ ಕಾರಣ ಸ್ಥಳದಲ್ಲಿಯೇ ಶರಣ್ ಮೃತಪಟ್ಟ. ನಿನ್ನೆ ರಾತ್ರಿ ಸ್ಮಶಾನದಲ್ಲಿ ಅಂತ್ಯ ಸಂಸ್ಕಾರ ಮಾಡಿ ಬಂದೆವು ಎಂದರು. ಅಂಕಲ್ ಮಾತು ಕೇಳುತ್ತಿದ್ದಂತೆ , ಹಾಗಾದರೆ ಈಗ ನಾನು ಇಲ್ಲಿಗೆ ಬಂದಿದ್ದು ನನ್ನ ಗೆಳೆಯನ ಆತ್ಮದ ಜೊತೆಗಾ! ಒಮ್ಮೆಲೇ ರಜತ್ ನ ಹೃದಯ ಬಡಿತ ಜೋರಾಗಿ ಹೊಡೆದುಕೊಳ್ಳಲು ಆರಂಭಿಸಿ ಭಯದಿಂದ ಅಲ್ಲೆ ಕುಳಿತು ಬಿಟ್ಟ.

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**06–04–2024 – ಶನಿವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಬಿಷ |
| ಯೋಗ | : ಶುಕ್ಲ |
| ಕರಣ | : ತೈತುಲ |
| ಸೂರ್ಯೋದಯ | : 06:15:29 |
| ಸೂರ್ಯಾಸ್ತ | : 18:43:13 |
| ರಾಹು | : 09:22–10:56 |
| ಯಮಘಂಡ | : 14:03–15:36 |
| ಗುಳಿಕ | : 06:15–07:49 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 05–04–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1579.82 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 881 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.380 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1581.99 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 6022 ಕ್ಯುಸೆಕ್ |
| ಸಾಮರ್ಥ್ಯ | 5.511 ಟಿಎಂಸಿ |

# ಗ್ರಾಮೀಣ ಪ್ರದೇಶದಲ್ಲಿ ಡಿಸಿ ಸಂಚಾರ ಬರನಿರ್ವಹಣೆ, ಕಾಮಗಾರಿ ಪರಿಶೀಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಏಪ್ರೀಲ್ 5ರಂದು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಪ್ರಗತಿ ಪರಿಶೀಲನೆಗಾಗಿ ವಿವಿಧಡೆ ಸಂಚರಿಸಿದರು.

ಹೊಸಪೇಟೆ ನಗರದಲ್ಲಿ ಬೆಳಗ್ಗೆ, ಹಸಿರುಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ ಡಾ.ಬಾಬು ಜಗಜೀವನರಾಮ್ ಅವರ ಜಯಂತ್ಯುತ್ಸವದಲ್ಲಿ ಭಾಗಿಯಾದ ಬಳಿಕ ಜಿಲ್ಲಾಧಿಕಾರಿಗಳು ಗ್ರಾಮೀಣ ಪ್ರದೇಶದತ್ತ ತೆರಳಿದರು.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿಗೆ ಭೇಟಿ ನೀಡಿದ ವೇಳೆಯಲ್ಲಿ ಜಿಲ್ಲಾಧಿಕಾರಿಗಳು, ಹರಪನಹಳ್ಳಿ ಪಟ್ಟಣದಲ್ಲಿನ ವಿವಿಧೆಡೆ ಸಂಚರಿಸಿದರು. ಇದೆ ವೇಳೆಯಲ್ಲಿ ನಗರೋತ್ಥಾನ ಯೋಜನೆಯಲ್ಲಿ ಕೈಗೊಂಡ ಕಾಮಗಾರಿಗಳ ಪ್ರಗತಿಯ ಬಗ್ಗೆ ಪರಿಶೀಲಿಸಿದರು.

**ಅಧಿಕಾರಿಗಳೊಂದಿಗೆ ಸಭೆ:** ಹರಪನಹಳ್ಳಿ ತಾಲೂಕಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಹರಪನಹಳ್ಳಿ ತಾಲೂಕುಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವು ಪೂರೈಕೆ ಮತ್ತು ಬರ ನಿರ್ವಹಣೆಯ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದರು. ಇದೆ ವೇಳೆ ಮಾತನಾಡಿದ ಜಿಲ್ಲಾಧಿಕಾರಿಗಳು, ಜನ–ಜಾನುವಾರುಗಳಿಗೆ ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆಯಾಗದಂತೆ ತೀವ್ರ ನಿಗಾವಹಿಸಲು ಕುಟ್ಟುನಿಟ್ಟಿನ ಸೂಚನೆ ನೀಡಿದರು. ಬರ ನಿರ್ವಹಣೆಗೆ ಅನುದಾನದ ಅಗತ್ಯವಿದ್ದಲ್ಲಿ ಆ ಬಗ್ಗೆ ತಿಳಿಸಿ ಪಡೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಚೆಕ್‌ಪೋಸ್ಟಗಳಿಗೆ ಭೇಟಿ:** ಗ್ರಾಮೀಣ ಪ್ರದೇಶದ ಪ್ರವಾಸದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಕುಮಾರನಳ್ಳಿ ತಾಂಡಾ ಮತ್ತು ಮತ್ತಿಹಳ್ಳಿ ಕ್ರಾಸ್ ಹತ್ತಿರದ ಚೆಕ್‌ಪೋಸ್ಟಗಳಿಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ಖುದ್ದು ಪರಿಶೀಲಿಸಿದರು. ಪ್ರತಿಯೊಂದು ವಾಹನವನ್ನು ತಪಾಸಣೆಗೊಳಪಡಿಸಬೇಕು. ಅನುಮಾನಾಸ್ಪದ ರೀತಿಯ ವಾಹನಗಳನ್ನು ತೀವ್ರ ತಪಾಸಣೆಗೊಳಪಡಿಸಬೇಕು ಎಂದು ಚೆಕ್‌ಪೋಸ್ಟನಲ್ಲಿ ಕಾರ್ಯನಿರತರಾಗಿದ್ದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.



# ಡಾ.ಬಾಬು ಜಗಜೀವನರಾಮ್ ಜೀವನ ಮೌಲ್ಯಗಳು ಅನುಕರಣೀಯ




**ಹಂಪಿ ಟೈಮ್ಸ್ ಹೊಸಪೇಟೆ**

ಸಮಾಜದಲ್ಲಿನ ದೀನ ದಲಿತರು, ಕೃಷಿಕರು, ಕಾರ್ಮಿಕರು ಸೇರಿದಂತೆ ಕಡುಬಡವರ ಏಳ್ಗೆಯ ಬಗ್ಗೆ ಕಾಳಜಿ ಹೊಂದಿ ಅನೇಕ ಜನಪರ ಯೋಜನೆಗಳನ್ನು ರೂಪಿಸಿ, ನೊಂದ ಜನಸಮುದಾಯದ ಏಳ್ಗೆಗೆ ಶ್ರಮಿಸಿದ ಹಸಿರುಕ್ರಾಂತಿಯ ಹರಿಕಾರ ಹಾಗೂ ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳಾದ ಡಾ.ಬಾಬು ಜಗಜೀವನರಾಮ್ ಅವರ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರು ಅರಿತು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ. ಎಸ್.ದಿವಾಕರ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಏಪ್ರಿಲ್ 5ರಂದು ನಡೆದ ಜಯಂತ್ಯುತ್ಸವ ಪ್ರಯುಕ್ತ ಹೊಸಪೇಟೆ ನಗರದ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಹತ್ತಿರದ ಡಾ.ಬಾಬು ಜಗಜೀವನರಾಮ್ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಈ ಹಿಂದೆ ಸಮಾಜದಲ್ಲಿ ಜಾತೀಯತೆ, ಅಸ್ಪೃಶ್ಯತೆ ವಿಪರೀತವಾಗಿತ್ತು. ಜಗಜೀವನ್ ರಾಮ್ ಅವರು ಶಾಲಾ ದಿನಗಳಲ್ಲಿದ್ದಾಗ ಅಸ್ಪೃಶ್ಯತೆಯ ಅವಮಾನವನ್ನು ಅನುಭವಿಸಿದರು. ಆಗ ಅವರಲ್ಲಿ ಹೋರಾಟದ ಮನೋಭಾವ ಬೆಳೆಯಿತು. ಅಸ್ಪೃಶ್ಯತೆ, ತಾರತಮ್ಯ, ಜಾತೀಯತೆ ವಿರುದ್ಧ ಪ್ರತಿಭಟನೆಗಳನ್ನು ನಡೆಸಿದರು. ಗಾಂಧಿಯವರು ನಡೆಸಿದ ಅಸ್ಪೃಶ್ಯತೆಯ ವಿರುದ್ಧ ಹೋರಾಟದಲ್ಲಿ ಸಹ ಅವರು ಭಾಗಿಯಾದರು ಎಂದು ತಿಳಿಸಿದರು.

ಜಗಜೀವನ್ ರಾಮ್ ಅವರು ತಮ್ಮ ಜೀವನದುದ್ದಕ್ಕು ಸಮ ಸಮಾಜದ ನಿರ್ಮಾಣಕ್ಕಾಗಿ ಹಾಗೂ ದಲಿತರ ಹಕ್ಕುಗಳಿಗಾಗಿ ಹೋರಾಡಿದರು. ಸಚಿವರಾಗಿದ್ದ ಅವಧಿಯಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಹೊಸ ಹೊಸ ಕಾಯ್ದೆ ಜಾರಿಗೆ ತಂದರು. ಅವರು ಕೃಷಿ ಸಚಿವರಾಗಿದ್ದಾಗ ಭಾರತದಲ್ಲಿ ಹಸಿರು ಕ್ರಾಂತಿ ನಡೆಯಿತು ಎಂದು ತಿಳಿಸಿದರು.

ಜಿಪಂ ಸಿಇಒ ಸದಾಶಿವ ಪ್ರಭು ಬಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಂ ಪಾಶಾ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದಪ್ಪ, ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಮತ್ತು ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಸಮಾಜದ ಬಂಧುಗಳು ಇದ್ದರು



**ಕೊಟ್ಟೂರಿನಲ್ಲಿ ಡಾ.ಬಾಬು ಜಗಜೀವನ್ ರಾಮ್ ಅವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಜಯಂತಿಯನ್ನು ಸರಳವಾಗಿ ಆಚರಿಸಿ, ತಹಶಿಲ್ದಾರ ಅಮರೇಶ್ ಜಿ. ಕೆ ಮಾತನಾಡಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ತುಕಾರಾಮ ಯಮನಪ್ಪ ಮಾದರ, ಪಶು ವೈದ್ಯಾಧಿಕಾರಿ ಕೊಟ್ರೇಶ್, ವೈದ್ಯಾಧಿಕಾರಿ ಡಾ. ಬದ್ಯಾನಾಯ್ಕ್, ಕಂದಾಯ ಇಲಾಖೆ ಕಂದಾಯ ನಿರೀಕ್ಷಕರು ಹಾಲಸ್ವಾಮಿ, ವಕೀಲರಾದ ಹನುಮಂತಪ್ಪ, ಅಜ್ಜಪ್ಪ, ಹಾಸ್ಟೆಲ್ ವಾರ್ಡನ್ ತುಪ್ಪದ ವೀರೇಶ್,ಪಪಂ ಸಿಬ್ಬಂದಿ ಪರಸಪ್ಪ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.**

# ಮತದಾನ ಜಾಗೃತಿಗೆ ಚೈತನ್ಯ ತುಂಬಿದ ವಿಶೇಷ ಚೇತನರು

## ವಿಶೇಷ ಚೇತನರ ತ್ರಿಚಕ್ರ ವಾಹನ ಜಾಥಾ ಕಾಂರ್ಯುಕ್ರಮಕ್ಕೆ ಸಿಇಓ ಸದಾಶಿವ ಪ್ರಭು ಚಾಲನೆ



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಸ್ವೀಪ್ ಸಮಿತಿ ಹಾಗೂ ನಗರ ಸಭೆ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಇವರ ಸಂಯುಕ್ತಾಶ್ರಯದಲ್ಲಿ ಏಪ್ರೀಲ್ 4 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ವಿಶೇಷ ಚೇತನರ ಯಂತ್ರಚಾಲಿತ ತ್ರಿಚಕ್ರ ವಾಹನ ಜಾಥಾ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಹಸಿರು ನಿಶಾನೆ ತೋರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ವಿಶೇಷಚೇತನರು ನಡೆಸಿದ ಜಾಥಾವು ಪರಿಣಾಮಕಾರಿಯಾಗಿದೆ. ನಗರದ ನಿವಾಸಿಗಳು ಮತಗಟ್ಟೆಗೆ ಬಂದು ಮತ ಚಲಾವಣೆ ಮಾಡುವಂತೆ ಪ್ರೇರಣೆ ನೀಡುವಲ್ಲಿ ಸಹಕಾರಿಯಾಗಿದೆ. ಈ ಬಾರಿ ಹೊಸಪೇಟೆ ನಗರ ವ್ಯಾಪ್ತಿಯಲ್ಲಿ ಶೇ.80 ರಿಂದ ಶೇ.90ರಷ್ಟು ಮತದಾನದ ಗುರಿ ಹೊಂದಲಾಗಿದೆ. ಈ ನಿಟ್ಟಿನಲ್ಲಿ ಸ್ವೀಪ್ ಸಮಿತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ ಎಂದು ತಿಳಿಸಿದರು. ವಿಶೇಷಚೇತನರು ಜಿಲ್ಲೆಯ ಇನ್ನಿತರ ನಗರ ಪ್ರದೇಶದಲ್ಲಿ ಸಹ ಬೈಕ್ ಜಾಥಾ ಕಾರ್ಯಕ್ರಮ ನಡೆಸಲು ಸಲಹೆ ಮಾಡಿದರು.

ನಗರಸಭೆ ಆಯುಕ್ತರಾದ ಚಂದ್ರಪ್ಪ, ತಾಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶಲಿಂಗ ಗೋತಿಖಿಂಡಿ, ಯೋಜನಾ ಅಂಕ ಮೌಲ್ಯಮಾಪನಾಧಿಕಾರಿ ಪತ್ರಿಬಸಪ್ಪ ಎನ್.ಕೆ., ಜಿಲ್ಲಾ ಪಂಚಾಯತ್ ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ಶ್ರೀಮತಿ ಅಂಬುಜಾ, ಸಾಧ್ಯ ಸಂಸ್ಥೆಯ ಮುಖ್ಯಸ್ಥರಾದ ಆರತಿ, ಎಲ್ಲಾ ತಾಲೂಕಿನ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ನಗರ ಪುನರ್ವಸತಿ ಕಾರ್ಯಕರ್ತರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಭಾವಹಿಸಿದ್ದರು.

ಸುಮಾರು 100ಕ್ಕು ಹೆಚ್ಚು ವಿಶೇಷಚೇತನರು ತ್ರಿಚಕ್ರ ವಾಹನ ಮತ್ತು ದ್ವಿಚಕ್ರ ವಾಹನಗಳ ಮೂಲಕ ಜಾಥಾದಲ್ಲಿ ಭಾಗವಹಿಸಿ ನಗರದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ ಮತದಾರರಲ್ಲಿ ಮತದಾನದ ಜಾಗೃತಿ ಮೂಡಿಸಿದರು.

# ಸೂಕ್ತ ದಾಖಲೆ ಇಲ್ಲದ ಸೀರೆ ಜಪ್ತಿ: ಡಿಸಿ ಪ್ರಶಾಂತ್ ಕೆ. ಮಿಶ್ರಾ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಗುರುವಾರ ಸೂಕ್ತ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 124 ಸೀರೆ (ರೂ.2,79,100 ಮೌಲ್ಯದ) ಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅಬಕಾರಿ ಪೊಲೀಸ್ ಅಧಿಕಾರಿಗಳಿಂದ 85.38 ಲೀಟರ್ (ರೂ.41946 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 8.32 ಲೀಟರ್ (ರೂ.1920 ಮೌಲ್ಯ) ಮದ್ಯ ಸೇರಿದಂತೆ ಒಟ್ಟು 89.70 ಲೀಟರ್ ಮದ್ಯ (ರೂ.43,866 ಮೌಲ್ಯ) ವಶಪಡಿಸಿಕೊಂಡು ಪ್ರಕರಣ ದಾಖಲಿಸಿದ್ದು, ಇಲ್ಲಿಯವರೆಗೆ ಒಟ್ಟು 8 ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಜಿಲ್ಲೆಯಾದ್ಯಂತ ಚುನಾವಣೆಯ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು 16 ಫ್ಲೈಯಿಂಗ್ ಸ್ಕ್ವಾಡ್, 24 ಎಸ್‌ಎಸ್‌ಟಿ ತಂಡ ಮತ್ತು 7 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ

# ವಿದ್ಯಾರ್ಥಿದೆಸೆಯಲ್ಲೆ ಸಾಮಾಜಿಕ ಸೇವೆ ಆರಂಭ

**ಹಂಪಿ ಟೈಮ್ಸ್ ಕೂಡ್ಲಿಗಿ**

ವಿದ್ಯಾರ್ಥಿ ದೆಸೆಯಲ್ಲಿಯೇ ಡಾ. ಬಾಬು ಜಗಜೀವನ ರಾಮ್ ಹರಿಜನ, ಗಿರಿಜನ ಮಕ್ಕಳಿಗೆ ಪುಸ್ತಕ, ಪೆನ್ನು ಸೇರಿದಂತೆ ಶಾಲೆಯ ದಾಖಲಾತಿ ಶುಲ್ಕವನ್ನು ಸಹ ಕಟ್ಟುತ್ತಿದ್ದರು ಎಂದು ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಸ್. ದುರುಗೇಶ್ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತ ಹಾಗೂ ದಲಿತ ಸಂಘಟನೆಗಳು ಶುಕ್ರವಾರ ಏರ್ಪಡಿಸಿದ್ದ ಡಾ.ಬಾಬು ಜಗಜೀವನ ರಾಮ್ ಅವರ 117 ನೆ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು. . ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗುಣಸಾಗರ ಕೃಷ್ಣಪ್ಪ, ಬಾಬು ಜಗಜೀವನ ರಾಮ್ ಸಂಘದ ತಾಲೂಕು ಅಧ್ಯಕ್ಷ ಸಾಸಲವಾಡ ಶಿವಣ್ಣ ಮಾತನಾಡಿದರು. ತಹಸೀಲ್ದಾರ್ ರಾಜು ಪಿರಂಗಿ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ವೈ.ರವಿ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಜಗದೀಶ್ ದಿಡಗೂರ್, ದಲಿತ ಸಂಘಟನೆಯ ಬಂಡೆ ರಾಘವೇಂದ್ರ, ಶಿವರಾಜ್,ಪರಶುರಾಮ, ಜಿಪಂ ಎಇಇ ಮಲ್ಲಿಕಾರ್ಜುನ, ಎಸ್ಸಿ ಅಧಿಕಾರಿ ಮೆಹಬೂಬ್ ಬಾಷ ಅರಸಿಕೆರೆ, ನಿವೃತ್ತ ನೌಕರರ ಸಂಘದ ತಾಲೂಕು ಅಧ್ಯಕ್ಷ ಎ.ಎಂ.ವೀರಯ್ಯ ಇದ್ದರು.

# ಹೊಸಪೇಟೆ ಶ್ರೀ ಸಣ್ಣಕ್ಕಿ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಮೊದಲ ಪುಟದಿಂದ

ಚಟುವಟಿಕೆಗಳಿಗೆ ಆಡಳಿತ ಮಂಡಳಿ ಅವಕಾಶ ನೀಡಬಾರದು. ಧಾರ್ಮಿಕ ಕಾರ್ಯಕ್ರಮ ಸುಗುಮವಾಗಿ ನಡೆಯಲಿ ಅಗತ್ಯ ಸಹಕಾರ ನೀಡಲಾಗುವುದು. ಸ್ವಯಂ ಸೇವಕರು ಸಹಕರಿಸಬೇಕು. ಜಾತ್ರೆಯಲ್ಲಿ ಯುವಕರು ಸೈಲೆನ್ಸ್ ಕಿತ್ತು ಬೈಕ್ ಚಾಲನೆ ಮಾಡಿದರೆ ಬೈಕ್ ವಶಕ್ಕೆ ಪಡೆದು ಅವರ ವಿರುದ್ಧ ಕ್ರಮ ಜರುಗಿಸಲಾಗುವುದು. ಅಗ್ನಿಕುಂಡದಲ್ಲಿ ಭಕ್ತರು ಪ್ರವೇಶಿಸುವುದರಿಂದ ಅಗ್ನಿಶಾಮಕದಳದವರು ಇರುವಂತೆ ನೋಡಿಕೊಳ್ಳಬೇಕು. ರಥೋತ್ಸವಕ್ಕೆ ತಾಗದಂತೆ ವಿದ್ಯುತ್ ತಂತಿಗಳ ಸರಿಪಡಿಸುವುದು, ಅಗತ್ಯ ಸ್ವಚ್ಛತೆ, ರಸ್ತೆ ಗುಣಮಟ್ಟ ಸೇರಿದಂತೆ ಅಗತ್ಯ ಕ್ರಮಗಳನ್ನು ಆಡಳಿತ ಮಂಡಳಿ ಕೈಗೊಂಡು ವರದಿ ನೀಡಬೇಕು ಎಂದರು. ದೇವಸ್ಥಾನದ ಮುಖಂಡ ಅಶ್ವಿನ್ ಕೋತಂಬ್ರಿ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯ ಆಚರಣೆಗೆ ಸಕಲ ವ್ಯವಸ್ಥೆ ಕೈಗೊಳ್ಳಲಾಗಿದೆ. ಅಗ್ನಿಕುಂಡ ದಿವಸ ಭಕ್ತರು ಸಾಲಿನಲಿ ಬರಲು ವಿಶೇಷ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ. ಭಕ್ತರು ಜಾತ್ರೆಯಲ್ಲಿ ಶ್ರದ್ಧಾಭಕ್ತಿಯಿಂದ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಈ ಬಾರಿ ಸ್ವಯಂ ಸೇವಕರು ಸೇವೆ ಸಲ್ಲಿಸಲಿದ್ದಾರೆ ಎಂದು ಜಾತ್ರೆಯ ಕುರಿತು ಮಹಿತಿ ನೀಡಿದರು.

ನಗರಸಭೆ ಸದಸ್ಯ ತಾರಿಹಳ್ಳಿ ಜಂಬುನಾಥ ಮಾತನಾಡಿ, ನಗರಸಭೆಯಿಂದ ಸ್ವಚ್ಛತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ, ಕಂಬಗಳಿಗೆ ವಿದ್ಯುದ್ದೀಪ ಅಳವಡಿಸಲಾಗುವುದು. ರಥೋತ್ಸವ ಎಳೆಯುವ ದೇವಸ್ಥಾನ ಮುಂದಿನ ರಸ್ತೆ ದರುಸ್ಥಿಗೊಳಿಸಬೇಕಿದ್ದು, ಶಾಸಕ ಹೆಚ್.ಆರ್.ಗವಿಯಪ್ಪನವರ ಬಳಿ ಚರ್ಚಿಸಿ ತೀರ್ಮಾನಿಸಲಾಗುವುದು, ನಗರಸಭೆವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.

ನಗರಸಭೆ ಸದಸ್ಯ ಮಂಜುನಾಥ, ಸಮಾಜದ ಹಿರಿಯ ಮುಖಂಡರಾದ ಗೊಗ್ಗಚನ್ನಬಸವರಾಜ, ಕೆ.ಗಂಗಾಧರ ಸೇರಿದಂತೆ ಸಮಾಜದ ಮುಖಂಡರು, ಮೇದಾರ ಸಮಾಜದ ಮುಖಮಡರು, ಸ್ವಯಂಸೇವಕರು ಇತರರು ಇದ್ದರು.

ವಿಜಯನಗರ ಜಿಲ್ಲೆಯ ಹಂಪಿ ಟೈಮ್ ಇ–ಪೇಪರ್‌ಗಾಗಿ
www.hampitimes.com | epaper.hampitimes.com







**Best Franchise (Dealership) Opportunity**

*in the following Pin codes*

*We are an innovative company Looking for Dynamic partners who can associate with us in exploring New Digital Business for a Life time Earnings*

| Sl.no | Location/s | Pin code | Sl.no | Location/s | Pin code |
|---|---|---|---|---|---|
| 1 | Koppal | 583227 | 11 | Gingera | 583228 |
| 2 | Gangavathi | 583227 | 12 | Toranagallu | 583123 |
| 3 | Sindhanoor | 584128 | 13 | Kampli | 583132 |
| 4 | Karatagi | 583229 | 14 | Sandur | 583119 |
| 5 | Kushtagi | 583227 | 15 | Bellary | 583101 |
| 6 | Ilkal | 587125 | 16 | Hampi-Kamalapur | 583239 |
| 7 | Yelburga | 583236 | 17 | Sirguppa | 583121 |
| 8 | Kuknoor | 583232 | 18 | H.B.Halli | 583212 |
| 9 | Tavargera | 583279 | 19 | Kudligi | 583135 |
| 10 | Sri Ramnagar | 583282 | 20 | Huvinahadgali | 583219 |

To know about the Company, the Business and your assocation with us and Your investment in various Pin codes listed above, Please attend our Up coming Business opportunity meeting at HOSPET - Post -583201 ( Vijayanagar Dist)

**Enroll yourself with us on**
**Wattsup No.9590556566 or**
**Call. Mob.9590556566**
**for initial details, with your profile**

Date of Meeting shall be shared once your registration is complete on our Wattsup number

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA